ನಾನು ಈ ಮನೆಯ ಸದಸ್ಯತ್ವಕ್ಕೆ ರಾಜಿನಾಮೆ ಕೊಡುವುದು ಅಲ್ಲದೇ ಸನ್ಯಾಸಿಯಾಗಿ ಹೊರಟು ಹೋಗುತ್ತೇನೆ. ಇಲ್ಲದೇ ಇದ್ದರೆ ಅವರು ಹೋಗಬೇಕು ಎಂದು ಹೇಳುತ್ತೇನೆ.

(*Interruptions*)

Mr. DEPUTY SPEAKER.—Hon'ble Minister for Food will reply to the Debate.

ಶ್ರೀ ಕೆ. ಹೆಚ್ ರಂಗನಾಥ್ (ಮೂಡಗೆರೆ).—16 ನೇ ತಾರೀಖು ಈ ಮನೆಯ ಕಾರ್ಯಕಲಾಪಗಳು ಮುಗಿಯುತ್ತದೆಯೋ ಎನ್ನುವುದು ನಿಶ್ಚಿತವಾಗಿ ಗೊತ್ತಾಗಲಿಲ್ಲ. ಇನ್ನು ಕೋ-ಆಪರೇಷನ್, ಹೋಮ್, ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡ್ಸ್ ಮತ್ತು ಅಪ್ರೋಪ್ರಿಯೇಷನ್ ಬಿಲ್ ಇವು ಮುಗಿಯಬೇಕಾಗಿವೆ.

ಉಪಾಧ್ಯಕ್ಷರು.—ಇವೊತ್ತು ಬಿಸಿನಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆದಿದ್ದೇವೆ. We will decide it.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಶ್ರೀಮಾನ್ ಭಾಸ್ಕರಶೆಟ್ಟಿ ರು ಪ್ರೊಸೀಂಡಿಗ್ಸ್ ವಿಷಯದಲ್ಲಿ ಯಾವುದೋ ಪತ್ರಿಕೆಯಲ್ಲಿ ತಪ್ಪು ವರದಿಯಾಗಿದೆ ಎಂದು ಹೇಳಿದಾಗ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುಬಹುದೇ ಹೊರತು ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ. ಹೇಗೆ ಅಗುವುದಿಲ್ಲ. ಈ ಸಭೆಯಲ್ಲಿ ನಡೆವಳಿಕೆ ಏನು ನಡದಿದೆ, ಮತ್ತು ಸರಿಯಾಗಿ ವರದಿ ಆಗದಿದ್ದರೆ, ಪತ್ರಿಕೆ ಸಂಪಾದಕರನ್ನು ಕರೆಸಿ ಅಲ್ಲಿ ಪತ್ರಿಕೆ ಪ್ರಕಟಿಸಿರುವುದು ಇಲ್ಲಿ ನಡವಳಿಕೆಗೆ ವಿರೋಧವಾಗಿದೆ ಎಂದು ಹೇಳುವುದಕ್ಕೆ ಅಧಿಕಾರ ಇದೆ. ಹಾಗೆ ಮಾಡಿದ ಹೊರತು ಕ್ರಮವಾಗುವುದಿಲ್ಲ. ಆ ರೀತಿ ಮಾಡಬೇಕೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

Mr. DEPUTY SPEAKER.—I will consider.

BUDGET ESTIMATES FOR 1968-69—DEMANDS FOR GRANTS

DEMAND NOS. 15 AND 53

(*Debate Continued*)

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ಮಾತನಾಡಿದಂಥ ಕಾಲಕ್ಕೆ ಕೆಲವು ವಿಷಯಗಳನ್ನು ಎತ್ತಿದ್ದಾರೆ. ಎಲ್ಲಾ ವಿಷಯಗಳ ಬಗ್ಗೆ ಕೂಲಂಕಷವಾಗಿ ಉತ್ತರ ಹೇಳಲಿಕ್ಕೆ ಸಾಧ್ಯವಾಗದಿದ್ದರೂ ಮುಖ್ಯವಾದಂಥ ವಿಷಯಗಳ ಬಗ್ಗೆ ಉತ್ತರ ಹೇಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮುಖ್ಯವಾಗಿ ನಾವು ಆಹಾರಧಾನ್ಯ ಸಂಗ್ರಹ ಮಾಡುವುದು ಒಂದು ಸರ್ಕಾರದ ಕಾರ್ಯಕ್ರಮ. ಈ ಆಹಾರಧಾನ್ಯ ಸಂಗ್ರಹ ಮಾಬೇಕಾಗಿದ್ದರೆ ಲೆವಿ ಮೂಲಕ ಸಂಗ್ರಹ ಮಾಡುತ್ತೇವೆ. ಎರಡನೆಯದು ರೂಲ್ ಅಫ್ ಪ್ರಿಯಂಪ್‌ಷನ್ ಎಂದರೆ ಮಾರ್ಕೆಟ್‌ನಲ್ಲಿ ಯಾರು ಹೆಚ್ಚಿಗೆ ಬೆಲೆ ಕೊಟ್ಟು ಆಹಾರ ಕೊಂಡುಕೊಳ್ಳುತ್ತಾರೋ ಅಂತಹವರಿಂದ ಮಾರ್ಕೆಟ್ ಕಮಿಟಿಯವರು ಅರ್ಧಧಾನ್ಯ ತೆಗೆದುಕೊಳ್ಳುತ್ತಾರೆ. ಈ ಬೆಲೆ ಕೊಡುವಂತೆ ಒಂದು ನಿಯಮ ಮಾಡಿದ್ದೇವೆ. ಆ ನಿಯಮದ ಪ್ರಕಾರ ಆಹಾರಧಾನ್ಯ ಕೊಂಡುಕೊಳ್ಳುವುದು ಒಂದು ಸಂಗ್ರಹದ ನೀತಿ. ಮೂರನೆಯದು ಸಹಕಾರಿ ಸಂಘಗಳಿಗೆ ಮಾರ್ಕೆಟ್‌ನಲ್ಲಿ ಯಾವ ರೀತಿ ಅನುಕೂಲವಾಗುತ್ತದೆ ಆ ರೀತಿ ಕೊಂಡುಕೊಳ್ಳುವುದು ಅದು ಒಂದು ತರಹ. ಇದರ ಹೊರತು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರು ನಮ್ಮ ರಾಜ್ಯದಲ್ಲಿ ಆಗಲಿ ಅಥವಾ ಇನ್ನು ಇತರ ಕಡೆಗಳಲ್ಲಿ ಆಗಲಿ ಆಹಾರಧಾನ್ಯಗಳನ್ನು ಕೊಂಡುಕೊಳ್ಳುತ್ತಾರೆ. ಅದರಲ್ಲೂ ನಮಗೆ ಆಹಾರಧಾನ್ಯ ಉಪಯೋಗ ಮಾಡಲಿಕ್ಕೆ ಆಗುತ್ತದೆ. ಈ ರೀತಿ ಆಹಾರಧಾನ್ಯ ಸಂಗ್ರಹ ಮಾಡುತ್ತೇವೆ. ಅದಲ್ಲದೆ ಕೇಂದ್ರ ಸರ್ಕಾರದವರು ಎಷ್ಟು ಸ್ಟಾಕ್ ಮಾಡುತ್ತಾರೋ ಅದರಲ್ಲಿ ಒಂದಂಶ ಆಹಾರಧಾನ್ಯ ನಮಗೆ ಕೊಡುತ್ತಾರೆ. ಇದು ಒಂದು ತರಹ ಆಹಾರಧಾನ್ಯ ಸಂಗ್ರಹ.

(ಶ್ರೀ ಬಿ. ಡಿ. ಜತ್ತಿ)

ಆಹಾರಧಾನ್ಯ ಕೂಡು ಹಾಕುವುದು ಮತ್ತು ಕೇಂದ್ರ ಸರ್ಕಾರದ ಸಹಾಯದಿಂದ ಆಹಾರ ಧಾನ್ಯ ಸಂಗ್ರಹ ಮಾಡುವುದು ಈ ಎರಡು ತರಹದಿಂದ ಎಷ್ಟು ಆಹಾರಧಾನ್ಯ ಸಿಕ್ಕುತ್ತದೆ ಎಂದು ಈ ಮೂರು ವರ್ಷದ ಅಂಕಿಸಂಖ್ಯೆಗಳನ್ನು ನಾನು ಕೊಡುತ್ತಿದ್ದೇನೆ. 1965–66 ರಲ್ಲಿ ನಮ್ಮ ರಾಜ್ಯದಲ್ಲಿ ಸಂಗ್ರಹ ಮಾಡಿದಂಥ ಆಹಾರಧಾನ್ಯದ ಬಗ್ಗೆ ವಿವರಣೆ ಕೊಡುತ್ತೇನೆ. ನಾವು ಸಂಗ್ರಹ ಮಾಡಬೇಕು ಎಂದು ಗೊತ್ತುಮಾಡಿದ್ದ ಟಾರ್ಗೆಟ್ 1965-66 ರಲ್ಲಿ 2 ಲಕ್ಷ 56 ಸಾವಿರದ 575 ಟನ್. ಆದರೆ ಪ್ರತ್ಯಕ್ಷವಾದ ಸಂಗ್ರಹ ಮಾಡಿದ್ದು 1 ಲಕ್ಷ 52 ಸಾವಿರದ 138 ಟನ್ 1966–67 ರಲ್ಲಿ ನಾವು ಅಪೇಕ್ಷೆ ಪಟ್ಟಿದ್ದ 3 ಲಕ್ಷ 97 ಸಾವಿರದ 754 ಟನ್ ಆದರೆ ಪ್ರತ್ಯಕ್ಷವಾಗಿ ಆಹಾರಧಾನ್ಯ ಸಂಗ್ರಹ 1 ಲಕ್ಷ 46 ಸಾವಿರದ 916 ಟನ್. 1967-68 ರಲ್ಲಿ ಈ ವರ್ಷ ಅಂದರೆ 2–4–1968 ರವರೆಗೆ ಸಂಗ್ರಹ ಮಾಡಬೇಕಾದುದು 2 ಲಕ್ಷ 46 ಸಾವಿರದ 877 ಟನ್. ಆದರೆ ಪ್ರತ್ಯಕ್ಷವಾಗಿ ನಾವು ಸಂಗ್ರಹಣೆ ಮಾಡಿದ್ದು 1 ಲಕ್ಷ 4 ಸಾವಿರದ 234 ಟನ್. ಈ ಮೂರು ವರ್ಷದ ಕಾರ್ಯಕ್ರಮದಿಂದ ಏನು ಗೊತ್ತಾಗುತ್ತದೆ ಎಂದರೆ ಎಷ್ಟು ಆಹಾರಧಾನ್ಯವನ್ನು ಲೆವಿ ಮೂಲಕ ಸಂಗ್ರಹ ಮಾಡಬೇಕು ಎಂದು ಪ್ರಯತ್ನ ಮಾಡಿದ್ದೆವೋ ಅದರ ಅರ್ಧದಷ್ಟು ಅಂದರೆ 100ಕ್ಕೆ 50 ರಷ್ಟು ಆಹಾರಧಾನ್ಯ ಸಂಗ್ರಹ ಮಾಡಿದ್ದೇವೆ. ಅದಕ್ಕಿಂತ ಹೆಚ್ಚಿಗೆ ಮಾಡಲಿಕ್ಕೆ ಹೋಗಿಲ್ಲ. ಈ ವರ್ಷ 1 ಲಕ್ಷ 50 ಸಾವಿರ ಟನ್‌ನಷ್ಟು ಆಹಾರಧಾನ್ಯ ಸಂಗ್ರಹ ಮಾಡಬೇಕು ಎಂದು ನಿರ್ಧಾರ ಮಾಡಿದ್ದೇವೆ. ಅದು ಆಗಬಹುದು ಎಂದು ಕಾಣುತ್ತದೆ. ಇನ್ನು ಸರ್ಕಾರದವರು ಲೆವಿ ಮೂಲಕ ಆಹಾರಧಾನ್ಯ ವಸೂಲು ಮಾಡುವುದು ಎಷ್ಟು ಮಾಡುತ್ತಾರೆ ಎನ್ನುವ ಸಮಸ್ಯೆ ಪುನಃ ಪುನಃ ಈ ಮನೆಯಲ್ಲಿ ಬರುತ್ತಾ ಇದೆ. ಇದನ್ನು ವಿಚಾರಣೆ ಮಾಡಿ ನೋಡಿದಾಗ ಉತ್ಪಾದನೆ ಮಾಡಿದ ಆಹಾರಧಾನ್ಯದಲ್ಲಿ 100ಕ್ಕೆ 8 ರಷ್ಟು ವಸೂಲ್ಮಾಡುತ್ತಿದ್ದೇವೆ. ಉಳಿದುದ್ದು ರೈತರ ಕಡೆ ಇರುತ್ತದೆ. ಸರ್ಕಾರದವರಿಗೆ ಕೊಡಬೇಕಾದ ಲೆವಿ ಕೊಟ್ಟನಂತರ ಉಪಯೋಗ ಮಾಡಬೇಕಾದುದಷ್ಟು ಮಾಡಿ ಉಳಿದಂಥಾದ್ದನ್ನು ಮಾರ್ಕೆಟಿನಲ್ಲಿ ಬೇಕಾದ ಬೆಲೆಗೆ ಮೈಸೂರು ರಾಜ್ಯದ ಯಾವ ಮಾರ್ಕೆಟಿನಲ್ಲೇ ಆಗಲಿ ಮಾರಾಟ ಮಾಡುವುದಕ್ಕೆ ಅವಕಾಶ ಇದೆ. ಬೆಲೆ ಬಗ್ಗೆ ಅನೇಕರು ಆಕ್ಷೇಪ ಎತ್ತಿದ್ದಾರೆ. ಸರ್ಕಾರದವರು ಲೆವಿ ಮೂಲಕ ಆಹಾರಧಾನ್ಯ ಕೊಂಡುಕೊಳ್ಳಬೇಕಾದರೆ ಬೆಲೆಯನ್ನು ನಿಗದಿ ಮಾಡುವುದು ಕೇವಲ ನಮ್ಮ ಕೈಯ್ಯಲ್ಲಿಲ್ಲ. ಮೈಸೂರು ರಾಜ್ಯದೊಳಗೆ ಯಾವ ರೀತಿ ಬೆಲೆ ನಿಗದಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ. ಕೇಂದ್ರ ಸರ್ಕಾರದವರು ವಕ್ಕಲುತನ ಇಲಾಖೆಯ ತಜ್ಞರ ಅಭಿಪ್ರಾಯ ತೆಗೆದುಕೊಂಡು ಬೆಲೆಯನ್ನು ನಿಗದಿ ಮಾಡಿದ ಕಾಲಕ್ಕೆ ಇಲ್ಲಿ ರೈತ ಭೂಮಿ ಒಳಗೆ ಬೀಜ ಹಾಕಿ ಆಹಾರ ಉತ್ಪಾದನೆ ಮಾಡುವ ತನಕ ಏನು ಖರ್ಚು ಬೀಳುತ್ತದೆ ಅದನ್ನು ಲೆಕ್ಕ ಹಾಕಿ ಬೆಲೆ ನಿಗದಿ ಮಾಡುತ್ತಾರೆ. ಅದರ ಪ್ರಕಾರ ಈ ವರ್ಷದ ಬೆಲೆ ಉತ್ತಮ ತರಹ ಭತ್ತ ಒಂದು ಕ್ವಿಂಟಾಲ್‌ಗೆ 52 ರೂಪಾಯಿ, ಅದಕ್ಕಿಂತ ಕಡಿಮೆ ತರಗತಿಯದು 51 ರೂಪಾಯಿ, ಸರ್ವಸಾಮಾನ್ಯ ತರಹದ್ದು 46 ರೂಪಾಯಿ, ಅದಕ್ಕಿಂತ ಕೆಳಗೆ ಇರುವುದು 45 ರೂಪಾಯಿ. ಜೋಳದಲ್ಲಿ ಮೂರು ತರಹ ಇದೆ. ಕೆಂಪು ಜೋಳ, ಹಳದಿ ಜೋಳ ಮತ್ತು ಬಿಳಿ ಜೋಳ. ಇದರಲ್ಲೂ ಮೂರು ತರಹ ಬೆಲೆ ಇದೆ. ಕೆಂಪು ಜೋಳ 35 ರೂಪಾಯಿ, ಹಳದಿ ಜೋಳ 52 ರೂಪಾಯಿ, ಬಿಳಿ ಜೋಳ 54 ರೂಪಾಯಿ ಇದೆ. ಸಜ್ಜೆ ಒಂದು ಕ್ವಿಂಟಾಲ್‌ಗೆ 52 ರೂಪಾಯಿ ಇದೆ. ಈ ರೀತಿ ನಿಗದಿ ಮಾಡಿ ಸರ್ಕಾರದವರು ಈ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಆಹಾರ ಧಾನ್ಯದ ಬೆಲೆ ಕೆಲವು ಮಟ್ಟಿಗೆ ಕಡಿಮೆಯಾಗುತ್ತಿದೆ. ಈ ರೀತಿ ಬೆಲೆ ಕಡಿಮೆ ಆದಾಗ ಅನೇಕ ಸದಸ್ಯರು ಕೇಳಿದರು ನೀವು ಏನು ಮಾಡುತ್ತೀರಿ ಎಂದು. ಸರ್ಕಾರದ ವಿಚಾರ ಹೀಗೆ ಇದೆ. ಈಗ ನಾನು ಹೇಳಿದ ದರದಂತೆ ಆಹಾರಧಾನ್ಯ ಮಾರ್ಕೆಟ್‌ನಲ್ಲಿ ಸಿಕ್ಕುತ್ತಾ ಇದ್ದರೆ ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ತೆಗೆದುಕೊಂಡು ಸಂಗ್ರಹ ಮಾಡಿ ಒಳ್ಳೆಯ ರೀತಿಯಿಂದ ಮುಂದಿನ ಉಪಯೋಗಕ್ಕೆ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದರಸಲುವಾಗಿ ರೈತರ ಯಾವ ವಿವಂಚನೆಗೂ ಒಳಗಾಗಕೂಡದು ಎಂದು ನನ್ನ ಅಭಿಪ್ರಾಯ ಇದೆ. ಸರ್ಕಾರದಲ್ಲಿ ಈಗಿರತಕ್ಕ ಸಮಸ್ಯೆಗಳು ಎರಡು. ಒಂದು ಆಹಾರ ಧಾನ್ಯಗಳನ್ನು ರೈತರ ಕಡೆಯಿಂದ ಕೊಂಡುಕೊಳ್ಳುವುದು ಮತ್ತು ಆ ರೀತಿ ಕೊಂಡುಕೊಳ್ಳುವ ಕಾಲಕ್ಕೆ ಸರಿಯಾದ ಬೆಲೆ ಅವರಿಗೆ ಸಿಗುವುದು, ಇದು ಒಂದು ಸಮಸ್ಯೆ. ಎರಡನೆಯದು ಕೊಂಡುಕೊಂಡ ಆಹಾರಧಾನ್ಯಗಳನ್ನು ಬಳಕೆದಾರರಿಗೆ ಹಂಚಬೇಕಾದರೆ ಅವರಿಗೆ ಯೋಗ್ಯ ಬೆಲೆಗೆ ಮಾರಾಟ ಮಾಡಬೇಕು. ಈ ಎರಡು ಸಮಸ್ಯೆಗಳು ಬಗೆಹರಿಯಬೇಕಾದರೆ, ಇದು ಒಂದು ಬಹಳ ಕಠಿಣ ಸಮಸ್ಯೆ. ಇದರಿಂದ ನಾವು ಮಾಡಬೇಕಾದುದು ಏನೆಂದರೆ, ರೈತರಿಗೆ ಯೋಗ್ಯ ಬೆಲೆ ಕೊಡಬೇಕು ಬಹಳ ಹೆಚ್ಚು

ಕೊಟ್ಟರೆ, ನಂತರ ಬಳಕೆದಾರರು ಕೊಂಡುಕೊಳ್ಳಬೇಕಾದರೆ, ಅವರು ಶಕ್ತಿಮೀರಿ ಹೆಚ್ಚಿನ ಬೆಲೆ ಕೊಟ್ಟು ಕೊಂಡು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ, ಅಥವಾ ನಾವು ಮಾಡಿದ್ದು ಸರಿಯೇ ಎಂದು ಈ ಎರಡೂ ಕಡೆ ನೋಡಿಕೊಂಡು ಹೊಂದಾಣಿಕೆ ಮಾಡಬೇಕು. ಆ ರೀತಿಯಾಗಿ ವ್ಯವಹಾರ ಮಾಡಿದ್ದೇವೆ.

ಇನ್ನು ಲೆವಿ ಬಗ್ಗೆ ಅನೇಕರು ಅನೇಕ ತೊಂದರೆಗಳನ್ನು ಹೇಳಿದ್ದಾರೆ. ಆದರೆ ಈಗಾಗಲೇ ಹೇಳಿದಂತೆ ಇದುವರೆಗೂ ನಾವು ಲೆವಿ ರೂಪದಲ್ಲಿ ಆಹಾರಧಾನ್ಯಗಳನ್ನು ವಸೂಲು ಮಾಡಿದ್ದು ಶೇಕಡ 50 ಕ್ಕಿಂತ ಕಡಿಮೆ ಇದೆ. ಅದಕ್ಕಿಂತ ಕಡಿಮೆ ಮಾಡಬೇಕು, ಜನಗಳಿಗೆ ಬಹಳ ಅನ್ಯಾಯವಾಗಿದೆ, ಕಷ್ಟವಾಗಿದೆ ಎಂದು ಹೇಳುತ್ತಾರೆ. ಆ ರೀತಿ ಆಗಿದೆಯೆಂದು ನನಗನ್ನಿಸುವುದಿಲ್ಲ, ಆ ಮಾತನ್ನು ನಾನು ಒಪ್ಪುವುದಿಲ್ಲ. ಇಲ್ಲಿ ಯಾವ ರೀತಿಯಲ್ಲೂ ರೈತರಿಗೆ ತೊಂದರೆಯಾಗಿಲ್ಲವೆಂದೂ ನಾನು ಹೇಳುವುದಕ್ಕೆ ಆಗುವುದಿಲ್ಲ. ಅಂತಹವರೂ ಅನೇಕರು ಇದ್ದಾರೆ. ಈಗ ಸರ್ಕಾರವಲ್ಲಿದ್ದು ಅಲ್ಲಿಯೇ ಕೆಲಸ ಮಾಡಿಕೊಂಡಿದ್ದು ಯಾರಾದರೂ ತಪ್ಪು ಮಾಡಿದ್ದರೆ, ಅದರಲ್ಲಿ ದೋಷವಿದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ತಕ್ಷಣ ಬರೆದು ತಿಳಿಸಿದ್ದಾರೆ. ಸಮಕ್ಷಮ ಡೆಪ್ಯುಟಿ ಕಮಿಷನರ್ ಅವರು ಕೆಲವು ಸಾರಿ ಸಭೆಗಳಿಗೆ ಬಂದಾಗ್ಗೆ ತಿಳಿಸಿದ್ದಾರೆ. ಇನ್ನೊಂದು ವಿಷಯ. ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇವೆಯೋ ಅಲ್ಲೆಲ್ಲಾ ಸರ್ಕಾರದವರು ಈಗಾಗಲೇ ಅನೇಕ ವಿಷಯಗಳನ್ನು ಈ ಬಗ್ಗೆ ತಿಳಿಸಿದ್ದಾರೆ. ಅದರೊಳಗೆ ಲೆವಿ ವಸೂಲು ಮಾಡಬೇಕಾದರೆ ಗ್ರಾಮ ಪಂಚಾಯತಿ ಸದಸ್ಯರು, ತಾಲ್ಲೂಕು ಬೋರ್ಡ್ ಸದಸ್ಯರುಗಳನ್ನು ಕೇಳಿ ಅವರಿಂದ ತಕ್ಕ ಸಲಹೆಗಳನ್ನು ತೆಗೆದುಕೊಂಡು ಯೋಗ್ಯವಾದಷ್ಟು ಅವರೂ ಇವರೂ ಕೂಡಿ ಒಂದು ಪಟ್ಟಿಯನ್ನು ಸಿದ್ಧಮಾಡಿ ಲೆವಿ ಪದ್ಧತಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿದೆ. ಒಟ್ಟಿನಲ್ಲಿ ಆ ವಿಚಾರದಲ್ಲಿ ಗ್ರಾಮಪಂಚಾಯತಿ ಸದಸ್ಯರನ್ನೂ ಮತ್ತು ತಾಲ್ಲೂಕು ಬೋರ್ಡ್ ಸದಸ್ಯರನ್ನೂ ಕೇಳಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ. ಆ ರೀತಿಯಾಗಿ ಎಲ್ಲಾ ಕಡೆಗಳಲ್ಲಿಯೂ ತಿಳಿಸಿದ ಮೇಲೆಯೂ ನಾವು ಏನೂ ಮಾಡಿಲ್ಲವೆಂದು ಹೇಳುವುದು ಖಂಡಿತವಾಗಿ ಸರಿಯಲ್ಲ. ಇನ್ನು ಮೂರನೆಯ ಮಾತು ಏನೆಂದರೆ, ರೈತರಿಗೂ ಕೂಡ ಸಂಪೂರ್ಣ ಹಕ್ಕು ಕೊಟ್ಟಿದೆ. ಸರ್ಕಾರದ ಅಧಿಕಾರಿಗಳು ಡಿಮ್ಯಾಂಡ್ ನೋಟೀಸನ್ನು ಸಿದ್ಧಮಾಡುವ ಕಾಲಕ್ಕೆ ಆ ಕ್ಷೇತ್ರ ಎಷ್ಟಿದೆ, ಆ ಕ್ಷೇತ್ರದಲ್ಲಿ ಎಷ್ಟು ಬೆಳೆಯಬಹುದು, ಎಷ್ಟು ಬೆಳೆದಿದೆ, ಬೆಳೆಯಾದ ಮೇಲೆ ಲೆವಿ ಮಾಡುವುದು ಕಾನೂನು ಪ್ರಕಾರ ಎಷ್ಟು ಇರುತ್ತದೆ — ಇವೆಲ್ಲವನ್ನೂ ಹೇಳಲು ಸಂಪೂರ್ಣ ಅಧಿಕಾರವನ್ನು ರೈತರಿಗೇ ಕೊಟ್ಟಿದೆ. ರೈತನಾದವನು ತನ್ನ ಖರ್ಚಿಗೆ ಎಷ್ಟು ಬೇಕು, ಬೀಜಕ್ಕೆ ಎಷ್ಟು ಬೇಕು ಎಂಬುದನ್ನು ನಿರ್ಣಯ ಮಾಡಿದನಂತರ ತಾವು ಮೊದಲು ಕೊಟ್ಟ ನೋಟೀಸಿಗಿಂತ ಆಹಾರ ಧಾನ್ಯ ಅವನಲ್ಲಿ ಕಡಿಮೆ ಇದ್ದರೆ ಆಗ ಅವನು ಏನೂ ಕೊಡಕೂಡದು ಎಂಬುದಾಗಿ ನಿರ್ಣಯ ಕೊಟ್ಟ ನಂತರ ಸರ್ಕಾರಕ್ಕೆ ಏನೂ ಕೊಡಬಾರದೆಂಬ ಬಗ್ಗೆ ಸಂಪೂರ್ಣ ಅಧಿಕಾರ ಕೊಟ್ಟಿದೆ. ಅದನ್ನು ಉಪಯೋಗ ಮಾಡದಿದ್ದರೆ ಅದು ಸರ್ಕಾರದ ತಪ್ಪು ಆಗುವುದಿಲ್ಲ. ಒಂದು ವೇಳೆ ರೈತ ಸಾಕಷ್ಟು ಓದಲಿಲ್ಲ, ಅದಕ್ಕೋಸ್ಕರ ಗೊತ್ತಾಗಲಿಲ್ಲವೆಂದು ಹೇಳಿದರೆ, ಆಗ ಸರ್ವರೂ ನಾವೂ ನೀವೂ ಕೂಡ ಸಹಾಯ ಮಾಡಬೇಕು. ಎಲ್ಲಾದರೂ ದೋಷಗಳಿದ್ದರೆ ಅವನ್ನು ಆಗ ಸರಿಪಡಿಸುತ್ತೇವೆ. ಇನ್ನು ಕೆಲವರು ಲೆವಿ ಇರಬೇಕು, ಇರಬಾರದು ಎಂಬುದಾಗಿ ಮಾತನಾಡಿದ್ದಾರೆ. ಲೆವಿ ಇರಬೇಕೆಂಬ ಮಾತನ್ನು ನಾವು ಈಗ ಒಪ್ಪಬೇಕು. ಸರ್ಕಾರದವರೂ ಒಪ್ಪಬೇಕು. ಆಹಾರ ಸಂಗ್ರಹಣೆ ಒಂದು ಲೆವಿ ಮೂಲಕವೇ ಆಗಬೇಕು. ಅದಕ್ಕಾಗಿ ಕೇಂದ್ರ ಸರ್ಕಾರ ಬೇರೆಬೇರೇ ಪ್ರಾಂತಗಳಿಂದ ಆಹಾರಧಾನ್ಯಗಳನ್ನು ಕೂಡಿಸಬೇಕು. ಎಲ್ಲಿ ಆಹಾರಧಾನ್ಯಗಳು ಸಿಗುವುದಿಲ್ಲವೋ, ಎಲ್ಲಿ ಅಭಾವ ಪರಿಸ್ಥಿತಿ ಇದೆಯೋ, ಎಲ್ಲಿ ಕಾರ್ಮಿಕರು ಹೆಚ್ಚು ಕೆಲಸ ಮಾಡುತ್ತಾರೆಯೋ ಅಲ್ಲಿಗೆ ಸಾಧ್ಯವಾದಷ್ಟು ಕಡಿಮೆ ಬೆಲೆಗೆ ಆಹಾರ ಪದಾರ್ಥಗಳನ್ನು ಒದಗಿಸಬೇಕು. ಈ ನಿಯಮವನ್ನು ನಾವೂ ಒಪ್ಪುತ್ತೇವೆ, ನೀವೂ ಒಪ್ಪುತ್ತೀರಿ. ಅಲ್ಲದೆ ಅದರಲ್ಲಿರತಕ್ಕ ದೋಷಗಳನ್ನು ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ. ಒಂದೆರಡು ದೋಷಗಳು ಈಗಾಗಲೇ ಸರ್ಕಾರಕ್ಕೆ ಗೊತ್ತಾಗಿವೆ. ಅವನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡಲಾಗಿದೆ.

ಇನ್ನು ಕೆಲವರು ಮಾರ್ಕೆಟ್‌ನಲ್ಲಿ ಯಾವ ಬೆಲೆಗಳಲ್ಲಿ ಆಹಾರಧಾನ್ಯಗಳು ಸಿಗುತ್ತವೋ ಆ ಬೆಲೆಗೇ ಸರ್ಕಾರದವರೂ ಸಹ ಕೊಂಡುಕೊಳ್ಳಬೇಕೆಂದು ಹೇಳಿದರು. ಮಾರ್ಕೆಟ್ಟಿನಲ್ಲಿ ಹೆಚ್ಚು ಬೆಲೆ ಇದ್ದಾಗ್ಗೆ ಕೊಂಡುಕೊಂಡು, ಬಳಕೆದಾರರಿಗೆ ಖರ್ಚು ಹೋಗಿ ಆ ಬೆಲೆಗೆ ಕೊಳ್ಳಿ ಎಂದು ಹೇಳಿದರೆ ಬಳಕೆದಾರರು ಶಕ್ತಿಮೀರಿ ಹಣಕೊಡಲು ಸಿದ್ಧರಿದ್ದಾರೆ. ಅದಕ್ಕಾಗಿಯೇ ಲೆವಿಯನ್ನು ಸ್ವಲ್ಪದಿನಗಳಾದರೂ ಇಡಬೇಕು. ತನ್ನಷ್ಟಕ್ಕೆ ತಾನೇ ಯಾವ್ಯಾವ ಪದಾರ್ಥಗಳು ಬೆಲೆಗಳು ಕಡಿಮೆಯಾಗುತ್ತವೆ ಎಂಬುದನ್ನೂ ಸಹ ನೋಡಬೇಕು. ಅದರಿಂದ ಲೆವಿ ಇಟ್ಟೇ ಇರಬೇಕು ಎಂಬುದಾಗಿ ಸಂಪೂರ್ಣವಾಗಿ ಈಗಲೂ ಹೇಳುವುದಿಲ್ಲ. ಮುಂದಿನಸಾಲಿ ಆಹಾರ ಸಂಗ್ರಹಣೆ

(ಶ್ರೀ ಬಿ. ಡಿ. ಜತ್ತಿ)

ಮಾಡುವಾಗ ಮಾನ್ಯ ಸದಸ್ಯರ ಸಲಹೆಗಳನ್ನೆಲ್ಲಾ ಪರಿಶೀಲನೆಗೆ ತೆಗೆದುಕೊಳ್ಳುತ್ತೇವೆ. ಮತ್ತೆ ಕೆಲವರು ಈಗ ಸರ್ಕಾರದವರು ಲೆವಿ ಏನು ವಸೂಲು ಮಾಡುತ್ತಾರೋ ಅದನ್ನು ತೆಗೆದುಹಾಕಬೇಕು, ಈ ರಾಜ್ಯದೊಳಗೆ ಮನಾಪಲಿ ಪ್ರೊಕ್ಯೂರ್‌ಮೆಂಟ್, ಸ್ಟ್ಯಾಚುಟರಿ ರೇಷನಿಂಗ್ — ಈ ಎರಡನ್ನೂ ಇಂಟ್ರೊಡ್ಯೂಸ್ ಮಾಡಬೇಕೆಂದು ಹೇಳಿದರು. ಇನ್ನು ಕೆಲವರು ವ್ಯಾಪಾರದ ರಾಷ್ಟ್ರೀಕರಣಮಾಡಿ ರೈತನಾದವನು ಏನೇನು ಬೆಳೆಯುತ್ತಾನೋ ಅದನ್ನು ಸರ್ಕಾರಕ್ಕೆ ತಂದುಕೊಡಬೇಕು, ಅದನ್ನೆಲ್ಲಾ ಸರ್ಕಾರದವರು ಗೋಡೌನಿನಲ್ಲಿ ಇಡಬೇಕೆಂದು ಹೇಳಿದ್ದಾರೆ. ಈ ತರಹವಾಗಿ ಹೆದರಿಸಿದರೆ, ನಾವು ಒಪ್ಪುವುದಿಲ್ಲ. ಸರ್ಕಾರದವರೂ ಸಹ ಒಪ್ಪುವುದಿಲ್ಲ. ನಮ್ಮ ರಾಜ್ಯದಲ್ಲಿ ಬೆಳೆದಿದ್ದನ್ನು ಸರ್ಕಾರ ಎಲ್ಲಾ ತೆಗೆದುಕೊಳ್ಳಬೇಕು, ಸರ್ಕಾರವೇ ಮಾರಾಟ ಮಾಡಬೇಕು, ರೈತರಿಗೆ ಮಾರಾಟಮಾಡುವುದಕ್ಕೆ ಶಕ್ತಿ ಇಲ್ಲ. ಶಾಶ್ವತವಾಗಿ ಒಂದೇ ಇಲಾಖೆ ಇದನ್ನು ತೆಗೆದುಕೊಳ್ಳುವ ವ್ಯವಸ್ಥೆಮಾಡಬೇಕು, ಪ್ರತ್ಯೇಕವಾಗಿ ಇತರ ಇಲಾಖೆಗಳು ಅಂದರೆ, ಹೋಂ ಡಿಪಾರ್ಟ್‌ಮೆಂಟ್, ರೆವಿನ್ಯೂ ಡಿಪಾರ್ಟ್‌ಮೆಂಟ್, ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಹಾಗೆ ಇರುವ ಈ ಇಲಾಖೆಯನ್ನೂ ಸಹ ಮಾಡಬೇಕು ಎಂದು ಕೆಲವರು ಹೇಳಿದರು. ಆ ರೀತಿಯಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಅದಕ್ಕೆ ಮುಂದೆ ಅವಶ್ಯಕತೆಯೂ ಬೀಳುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ. ಈ ವರ್ಷದಲ್ಲಿ ಆಹಾರಧಾನ್ಯಗಳ ಪರಿಸ್ಥಿತಿ ಸ್ವಲ್ಪ ಒಳ್ಳೆಯದಾಗಿದೆ. ಉತ್ತರಹಿಂದೂಸ್ಥಾನದಲ್ಲಿ ಆಹಾರಧಾನ್ಯಗಳನ್ನು ಬಹಳ ಚೆನ್ನಾಗಿ ಬೆಳೆದಿದ್ದಾರೆ. ಅಲ್ಲಿ ನಿರ್ಬಂಧ ಕಡಿಮೆಮಾಡಿದ್ದಾರೆ. ಜೋಳ, ಸಜ್ಜೆ, ಮುಸುಕಿನ ಜೋಳ, ಬಾರ್ಲಿ, ಕಡಲೇಬೇಳೆ, ತೊಗರಿಬೇಳೆ—ಈ ಪದಾರ್ಥಗಳನ್ನು ಇತ್ತೀಚೆಗೆ ನಮ್ಮ ದೇಶದಲ್ಲಿ ಬೆಳೆಯುತ್ತಿದ್ದಾರೆ. ಅಂತಹ ಆಹಾರ ಧಾನ್ಯಗಳನ್ನೂ ಸಹ ನಮ್ಮಲ್ಲಿ ಹೆಚ್ಚಿಗೆ ಬೆಳೆಯುತ್ತಿದ್ದಾರೆ. ಅದಕ್ಕೋಸ್ಕರವೇ ಸ್ವಲ್ಪಮಟ್ಟಿಗೆ ಬೆಲೆ ಕಡಿಮೆಯಾಗಿದೆ. ಆದ್ದರಿಂದ ಯಾರೂ ಅದರ ಬಗ್ಗೆ ಹೆದರಬೇಕಾಗಿಲ್ಲ. ಡಾ. ನಾಗನಗೌಡರು ಮಾತನಾಡುತ್ತಾ ಈಗ ಆಹಾರ ಧಾನ್ಯಗಳ ಬೆಲೆ ಒಂದು ಸ್ಥಿಮಿತಕ್ಕೆ ಬರಬೇಕು, ಒಂದು ಸ್ಟ್ಯಾಂಡರ್ಡೈಜ್ ಆಗಬೇಕು, ಆಗ ರೈತರಿಗೆ ಇಂತಿಷ್ಟು ಜಾಸ್ತಿ ಬೆಲೆ ಬರುತ್ತದೆ, ಆಹಾರಧಾನ್ಯಗಳನ್ನೂ ಸಹ ಅವರು ಹೆಚ್ಚುಹೆಚ್ಚಿಗೆ ಬೆಳೆಯುತ್ತಾರೆ; ಆ ಒಂದು ಧೈರ್ಯ ಅವರಿಗೆ ಬರುತ್ತದೆ. ಈ ರೀತಿಯಲ್ಲಿ ಅನೇಕ ದೇಶಗಳಲ್ಲಿ ಮಾಡಿದ್ದೇವೆ. ಅದೇ ರೀತಿಯಲ್ಲಿ ಇಲ್ಲಿ ಮಾಡಬೇಕೆಂಬುದಾಗಿ ಹೇಳುತ್ತಾರೆ. ಸದ್ಯಕ್ಕೆ ಇರುವ ಪದ್ಧತಿ ಪ್ರಕಾರ ನಾನು ಹೇಳಿದ ರೀತಿಯಲ್ಲಿ ಆ ಬೆಲೆಗಳಿಗೆ ಸರ್ಕಾರದವರು ಕೊಂಡುಕೊಳ್ಳಲಿಕ್ಕೆ ಸಿದ್ಧರಿದ್ದಾರೆ. ಮುಸುಕಿನ ಜೋಳ 75 ರೂಪಾಯಿಗಳಿಂದ 100 ರೂಪಾಯಿಗಳವರೆಗೆ ಒಂದು ಕ್ವಿಂಟಾಲ್‌ಗೆ ಮಾರಾಟವಾಗುತ್ತಿತ್ತು. ಈಗ ಅದರ ಬೆಲೆ ಕಡಿಮೆಯಾಗಿದೆ. ಆದರೆ 60 ರೂಪಾಯಿಗಳಿಗಿಂತ ಕಡಿಮೆಯಾಗಿಲ್ಲ. ಲೆವಿ ಮೂಲಕ ಕೊಡುಕೊಂಡಿಲ್ಲ. ಬಿಳೀ ಜೋಳ 64 ರೂಪಾಯಿಗಳ ಬೆಲೆ ಇದ್ದರೂ ಅದು ಕಡಿಮೆಯಾಗಿಲ್ಲ. ಈಗ 54 ರಿಂದ 60ರವರೆಗೆ ಆಗಿದೆ. 54 ರೂಪಾಯಿಗಳಂತೆ ಬಂದರೆ ಎಷ್ಟು ಬೇಕಾದರೂ ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ. ಸ್ಟಾರ್ಚ್ ಮಾಡತಕ್ಕ ಕೈಗಾರಿಕೆಯವರು ಹೊರಗಡೆ ದೇಶಗಳಲ್ಲಿ ಮುಸುಕಿನ ಜೋಳದ ಬೆಲೆ ಕಡಿಮೆ ಇದ್ದರೆ, ಇಲ್ಲಿ ರೈತ ಬೆಳೆದಂಥ ಮುಸುಕಿನ ಜೋಳಕ್ಕೆ ಜಾಸ್ತಿ ಬೆಲೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರದವರು ಹೇಳಿದರು. ಹೋದವರ್ಷ ಆ ರೀತಿಯಾಗಿ ಕೇಂದ್ರ ಸರ್ಕಾರದವರು ಮಾಡಿದ್ದರೂ ರಾಜ್ಯ ಸರ್ಕಾರದವರು ಅವರಿಗೆ ಕಟ್ಟುನಿಟ್ಟಾಗಿ ಬರೆದಿದ್ದಾರೆ. ಅವರಿಗೆ ಸ್ಪಷ್ಟವಾಗಿ ಹೇಳಿದ್ದೇವೆ. ಇನ್ನು ಮುಂದೆ ಪರದೇಶಗಳಿಂದ ಮುಸುಕಿನಜೋಳ ತರಿಸಬಾರದೆಂದು. ಹೈಬ್ರಿಡ್ ಮುಸುಕಿನ ಜೋಳದ ಬೀಜಗಳನ್ನು ಉಪಯೋಗಮಾಡಿ ಸಾಕಷ್ಟು ಇಲ್ಲಿಯೇ ಬೆಳೆಯಬೇಕೆಂದೂ, ಅದನ್ನು ಇನ್ನು ಮುಂದೆ ಹೊರಗಿನಿಂದ ತರಿಸಲು ಅವಶ್ಯಕತೆ ಇಲ್ಲವೆಂದು ಮಾನ್ಯ ಶ್ರೀ ಜಗಜ್ಜೀವನರಾಂ ಅವರು ಸ್ಪಷ್ಟವಾಗಿ ಒಪ್ಪಿಗೆ ಕೊಟ್ಟಿದ್ದಾರೆ. ಮುಸುಕಿನ ಜೋಳ ತರುವುದಿಲ್ಲ, ನೀವು ಎಷ್ಟು ಬೇಕಾದರೂ ಬೆಳೆಯಿರಿ, ಸ್ಟಾರ್ಚ್ ಫ್ಯಾಕ್ಟರಿಗೆ ಕೊಟ್ಟರೆ ನನ್ನ ಅಭ್ಯಂತರವಿಲ್ಲವೆಂದೂ ಹೇಳಿದ್ದಾರೆ. ನಾನು ಆ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ.

ಇನ್ನು ಸಹಕಾರಿ ಸಂಸ್ಥೆಗಳ ಬಗ್ಗೆ ಹೇಳುವುದಾದರೆ, ಪ್ರಿಎಂಪ್ಷನ್ ಪದ್ಧತಿ ಪ್ರಕಾರ ನಮ್ಮಲ್ಲಿ 8 ಸಹಕಾರೀ ಸಂಸ್ಥೆಗಳಿವೆ. ಅವುಗಳನ್ನು ಒಪ್ಪಿದ್ದೇವೆ. ಎಲ್ಲಾ ಕಡೆಯೂ ಒಪ್ಪಲಿಲ್ಲ. 8 ಸಹಕಾರ ಸಂಘಗಳು ಚೆನ್ನಾಗಿ ಕೆಲಸಮಾಡುತ್ತಿವೆ. ಎಸ್ಟ್ಯಾಬ್ಲಿಷ್‌ಮೆಂಟ್ ಚೆನ್ನಾಗಿದೆ. ಹಣವಿದೆ. ಅಲ್ಲಿ ವ್ಯಾಪಾರ, ಉದ್ದಿಮೆಗಳಲ್ಲಿ ಚನ್ನಾಗಿ ತಿಳಿದವರೂ ಇದ್ದಾರೆ. ಪ್ರಿಎಂಪ್ಷನ್ ಪದ್ಧತಿ ಪ್ರಕಾರ ಆಹಾರವನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದೆ. ಕೆಲವು ಸಹಕಾರ ಸಂಘಗಳು ತಮಗೆ ಇಷ್ಟಬಂದಂತೆ ಕೊಂಡರೆ ಮುಂದೆ ಮಾರಾಟಮಾಡುವ ಅವಕಾಶ ಬರುತ್ತದೆಂದು ಅವರಿಗೆ ಹೇಳಿದೆ. ಸಹಕಾರ ಸಂಘಗಳ ಮುಖಾಂತರ ಹೊಸದಾಗಿ 22,491 ಟನ್ ಭತ್ತವನ್ನು ಕೊಂಡು

ಕೊಂಡಿದ್ದೇವೆ. ಇನ್ನುಳಿದ ಭತ್ತವನ್ನು ಮತ್ತು ಇತರ ಆಹಾರಧಾನ್ಯಗಳನ್ನು ಕೊಂಡುಕೊಳ್ಳು ವುದಕ್ಕೆ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದುವರೆಗೆ ಕೊಂಡಿರುವ ಬತ್ತದ ಬೆಲೆ 65ರಿಂದ 79 ರೂಪಾಯಿಗಳವರೆಗೆ ಇದೆ. ಆ ಬೆಲೆ ಇನ್ನೂ ಹೆಚ್ಚು ಕಡಿಮೆಯಾಗುತ್ತಾ ಇದೆ. ಆದರೂ ಆ ಬೆಲೆಯ ಪ್ರಕಾರವೇ ಬತ್ತ ಕೊಂಡುಕೊಂಡಿದ್ದೇವೆ.

10-00 A.M.

[MR. CHAIRMAN (Sri S. D. KOTHAVALE) in the Chair.]

ಇನ್ನು ನಾನೀಗ ಈ ಆಹಾರ ಪದಾರ್ಥಗಳ ವಿನಿಯೋಗ ಅಥವಾ ಅವುಗಳ ಹಂಚಿಕೆ ವಿಷಯ ದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಾನಾಗಲೇ ಹೇಳಿದಹಾಗೆ ಹೋದ ವರ್ಷ ಮತ್ತು ಅದರ ಹಿಂದಿನ ವರ್ಷ ಎಲ್ಲೆಲ್ಲಿ ಸರಿಯಾಗಿ ಮಳೆಯಾಗಲಿಲ್ಲವೋ ಅಂಥ ಕಡೆಗಳಿಗೆ ಮತ್ತು ಹೆಚ್ಚು ಕೂಲಿಗಾರರು ಕಾರ್ಮಿಕರು ಕೆಲಸ ಮಾಡುವಂಥ ಸ್ಥಳಗಳಿಗೆ ಮತ್ತು ಹೆಚ್ಚು ನೇಕಾರರು ಕೆಲಸ ಮಾಡುವಂಥ ಸ್ಥಳಗಳಿಗೆ ಹೆಚ್ಚಿನ ಆಹಾರ ಧಾನ್ಯಗಳನ್ನು ಒದಗಿಸುವುದಕ್ಕಾಗಲಿಲ್ಲ. ನಾವು ಈಗ ಧಾನ್ಯಗಳನ್ನು ಹಂಚುವ ಎರಡು ಮಾರ್ಗಗಳನ್ನು ಅನುಸರಿಸಲಾಗುತ್ತಿದೆ. ಅದರಲ್ಲಿ ಒಂದ ನೆಯದು ಇನ್‌ಫಾರ್ಮಲ್ ರೇಷನಿಂಗ್ ಏರಿಯಾ ಎಂದು ಹೇಳಿ ಬೆಂಗಳೂರು ಸಿಟಿ ಮತ್ತು ಕೋಲಾರ್ ಗೋಲ್ಡ್ ಮೈನಿಂಗ್ ಏರಿಯಾ ಈ ಎರಡು ಸ್ಥಳಗಳಲ್ಲಿ ಒಂದೊಂದು ತಿಂಗಳಿಗೆ ದೊಡ್ಡವರೊಬ್ಬರಿಗೆ 8 ಕೆ. ಜಿ. ಧಾನ್ಯವನ್ನು ಕೊಡಲಾಗುತ್ತಿದೆ. ಆ 8 ಕೆ. ಜಿ. ಧಾನ್ಯಗಳೆಂದರೆ:— 3 ಕೆ. ಜಿ. ಅಕ್ಕಿ, 3 ಕೆ. ಜಿ. ಗೋಧಿ ಮತ್ತು 2 ಕೆ. ಜಿ. ಜೋಳ ಹೀಗೆ 8 ಕೆ. ಜಿ. ಧಾನ್ಯವನ್ನು ಹಂಚಲಾಗುತ್ತಿದೆ. ಇನ್ನು ಎಲ್ಲೆಲ್ಲಿ ಈ ಇನ್‌ಫಾರ್ಮಲ್ ರೇಷನ್ ಪದ್ಧತಿ ಜಾರಿಯಲ್ಲಿಲ್ಲವೋ ಅಂಥ ಪ್ರದೇಶಗಳಿಗೆ ಒಂದೊಂದು ಕುಟುಂಬಕ್ಕೂ ಒಂದು ತಿಂಗಳಿಗೆ ಸಧಾರಣವಾಗಿ 5 ಕೆ. ಜಿ ಧಾನ್ಯವನ್ನು ಅದು ಯಾವುದಾದರೂ ಆಗಬಹುದು, ಅಕ್ಕಿಯಾಗಬಹುದು, ಇಲ್ಲವೇ ಗೋಧಿಯಾಗಬಹುದು ಅಥವಾ ಇನ್ನಾವುದಾದರೂ ಧಾನ್ಯವಾಗಬಹುದು; ಹೀಗೆ ಅಲ್ಲಿಗೆ ಕೊಡುತ್ತ ಬರುತ್ತಿದ್ದೇವೆ. ಆದರೆ ಅದರಲ್ಲಿ ರೈಲ್ವೆ ಕಾರ್ಮಿಕರಿಗೆ ಮಾತ್ರ 7 ಕೆ. ಜಿ. ಕೊಡುತ್ತಿದ್ದೇವೆ. ಈ ರೀತಿ ನಾವು ಆಹಾರ ಧಾನ್ಯಗಳ ಹಂಚಿಕೆಯನ್ನು ಮಾಡಿಕೊಂಡು ಬರುತ್ತಿದ್ದೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಗ್ರಾಮಾಂತರ ಪ್ರದೇಶದಲ್ಲಿರ ತಕ್ಕವರಿಗೆ ಒಂದು ಕುಟುಂಬಕ್ಕೆ ಒಂದು ತಿಂಗಳಿಗೆ 4 ಕೆ. ಜಿ. ಮಾತ್ರ ಕೊಡುತ್ತಿದ್ದಾರೆ. ಇದನ್ನು ಏತಕ್ಕೆ ಕೊಡಬೇಕು ?

ಶ್ರೀ ಬಿ. ಡಿ. ಜತ್ತಿ.—ನಾನು ಮಾತನಾಡತಕ್ಕ ಕಾಲದಲ್ಲಿ ದಯವಿಟ್ಟು ಯಾರೂ ಮಧ್ಯೆ ಬಾಯಿ ಹಾಕಬಾರದೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಸರಕಾರದವರು ಇಲ್ಲಿಯವರೆಗೂ ಹಂಚುವು ದಕ್ಕಾಗಿ ಸಂಗ್ರಹಣೆ ಮಾಡಿದ್ದು ಒಟ್ಟು ಧಾನ್ಯದಲ್ಲಿ ಅಂದರೆ 2 ಲಕ್ಷ 54 ಸಾವಿರ ಟನ್ನಿನಲ್ಲಿ ನಾವು ಲೆವಿ ಪದ್ಧತಿಯಿಂದ ವಸೂಲ್ಮಾಡಿರತಕ್ಕ ಧಾನ್ಯ ಎಷ್ಟೆಂದರೆ— 70 ಸಾವಿರ ಟನ್ ಅಕ್ಕಿ ಇಷ್ಟು ಸಂಗ್ರಹಣೆ ಮಾಡಿದ್ದೇವೆ. ಜೋಳ ಮತ್ತು ಸಜ್ಜೆ 60 ಸಾವಿರ ಟನ್ ಸಂಗ್ರಹಣೆ ಮಾಡಿದ್ದೇವೆ. ಇನ್ನು ಕೇಂದ್ರ ಸರ್ಕಾರದವರಿಂದ ನಾವು ಹೆಚ್ಚಿಗೆ ಪಡೆದಿದ್ದು ಅಕ್ಕಿ 24 ಸಾವಿರ ಟನ್, ಗೋಧಿ 60 ಸಾವಿರ ಟನ್ ; ಮತ್ತು 40 ಸಾವಿರ ಟನ್ ಮೈಲೊ — ಹೀಗೆ ಒಟ್ಟು 2 ಲಕ್ಷ 54 ಸಾವಿರ ಟನ್ ಆಹಾರ ಧಾನ್ಯಗಳನ್ನು ಸಂಗ್ರಹಣೆ ಮಾಡಿದ್ದೇವೆ. ಆದರೆ ನಮ್ಮ ರಾಜ್ಯಕ್ಕೆ ಒಟ್ಟು ಒಂದು ವರ್ಷಕ್ಕೆ ಬೇಕಾಗಿರತಕ್ಕ ಆಹಾರ ಧಾನ್ಯ ಎಷ್ಟು ಎಂದರೆ ಅಕ್ಕಿ 1 ಲಕ್ಷ 15 ಸಾವಿರ ಟನ್, ಗೋಧಿ 65 ಸಾವಿರ ಟನ್ ಮೈಲೊ 65 ಸಾವಿರ ಟನ್ ; ಮತ್ತು ಕೋರ್ಸ್ ಧಾನ್ಯಗಳು 75 ಸಾವಿರ ಟನ್ ಹೀಗೆ ಒಟ್ಟು 3 ಲಕ್ಷ 20 ಸಾವಿರ ಟನ್. ನಾವು ಈಗಾಗಲೆ ಇದರ ಬಗ್ಗೆ ಕೊಂಡಿಟ್ಟಿರುವುದು 2 ಲಕ್ಷ 75 ಸಾವಿರ ಟನ್. ಇನ್ನು ಕಡಮೆ ಬೀಳತಕ್ಕ ಆಹಾರಧಾನ್ಯಗಳನ್ನು ಒದಗಿಸಿಕೊಳ್ಳಲು ನಾವು ಸಹ ಕಾರ ಸಂಘಗಳವರಿಗೆ ಓಪನ್ ಮಾರ್ಕೆಟ್ಟಿನಲ್ಲಿ ಪ್ರಿಯಂಪಷನ್ ಪ್ರಕಾರ ಕೊಂಡುಕೊಳ್ಳುವುದಕ್ಕೆ ಅವರಿಗೆ ತಿಳಿಸಿದ್ದೇವೆ. ಆದರಿಂದ ನಮ್ಮ ಖೋತಾವನ್ನು ಭರ್ತಿ ಮಾಡಿಕೊಳ್ಳುವ ಮಾರ್ಗ ಒಂದು. ಅದರ ಜೊತೆಗೆ ಫುಡ್‌ಕಾರ್ಪೊರೇಷನ್ ಆಫ್ ಇಂಡಿಯಾದವರು ಕೊಳ್ಳತಕ್ಕ ಧಾನ್ಯದಲ್ಲಿ ನಮಗೆ ಖೋತಾ ಬೀಳುವುದನ್ನು ನಾವು ಅವರಿಂದ ಕೊಳ್ಳಬಹುದು. ಅವರಿಂದ ನಮಗೆ ಸಾಧ್ಯವಾದಷ್ಟೂ ಕಡಮೆ ಬೆಲೆಗೆ ಆಹಾರಧಾನ್ಯ ಸಿಕ್ಕುತ್ತದೆ. ಹೀಗೆ ನಾವು ಒಂದು ವರ್ಷಕ್ಕೆ ಬೇಕಾಗುವ ಆಹಾರ ಧಾನ್ಯವನ್ನು ಸಂಗ್ರಹಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದೇವೆ.

(ಶ್ರೀ ಬಿ. ಡಿ. ಜತ್ತಿ)

ಇನ್ನು ಮೂರನೆಯದಾಗಿ ಸಕ್ಕರೆ ಹಂಚಿಕೆಯ ವಿಚಾರಕ್ಕೆ ಬಂದರೆ: ಹೋದ ವರ್ಷ ಮತ್ತು ಅದರ ಹಿಂದಿನ ವರ್ಷ ಸರಿಯಾಗಿ ಮಳೆಯಾಗದೆ ನಮ್ಮಲ್ಲಿ ಎಷ್ಟು ಕಬ್ಬಿನ ಬೆಳೆಯಾಗಬೇಕೋ ಅಷ್ಟಾಗಲಿಲ್ಲ. ಹೀಗಾಗಿ ಕಮ್ಮಿ ಬೆಳೆ ಆದ್ದರಿಂದ ಕಬ್ಬಿನ ಕಾರ್ಖಾನೆಯವರಿಗೆ ಎಷ್ಟು ಕಬ್ಬು ಬೇಕೋ ಅಷ್ಟು ಕಬ್ಬು ಅವರಿಗೆ ಸಿಕ್ಕಲಿಲ್ಲ. ಆದ್ದರಿಂದ ಸಕ್ಕರೆ ಸರಬರಾಯಿಗೆ ಸ್ವಲ್ಪ ತೊಂದರೆ ಯುಂಟಾಯಿತು. ಆಗ ಕೇಂದ್ರ ಸರ್ಕಾರದವರು ಒಂದು ಆರ್ಡರನ್ನು ಹೊರಡಿಸಿದರು.

> " Out of the total production of sugar, 40 per cent can be sold in the open market and the remaining 60 per cent should be procured by the Central Government by way of levy according to the rate fixed. "

ಈ ಆಜ್ಞೆಯ ಪ್ರಕಾರ ಕಬ್ಬಿನ ಕಾರ್ಖಾನೆಯವರಿಗೆ ನಿರೀಕ್ಷಿಸಿದ ದರದಲ್ಲಿ ಕಬ್ಬು ಸಿಕ್ಕಲಿಲ್ಲ. ಆಗ ಅವರು ಕಬ್ಬನ್ನು ಬೆಳೆಯತಕ್ಕ ರೈತರಿಗೆ ಹೆಚ್ಚಿನ ಬೆಲೆಯನ್ನು ಕೊಡಬೇಕಾಯಿತು. ಹಾಗೆ ಹೆಚ್ಚಿನ ಬೆಲೆಯನ್ನು ಕೊಟ್ಟು ಕೊಂಡ ಕಬ್ಬಿನಿಂದ ಉತ್ಪನ್ನವಾದ ಸಕ್ಕರೆಯನ್ನು ಅವರು ನಷ್ಟಗೆ ಕಡಮೆ ಬೆಲೆಗೆ ಮಾರಾಟ ಹೇಗೆ ಮಾಡುತ್ತಾರೆಂಬ ಪ್ರಶ್ನೆ ಬಂತು. ಆಗ ಅವರಿಗೆ ಸಪ್ಲೈ ಆಗತಕ್ಕ ಕಬ್ಬಿನಲ್ಲಿ ನೂರು ಭಾಗದಲ್ಲಿ ಶೇ: 40 ರಷ್ಟು ಕಬ್ಬಿನಿಂದ ಉತ್ಪನ್ನವಾಗತಕ್ಕ ಸಕ್ಕರೆಯನ್ನು ಮಿಲ್ ಮಾಲೀಕರು ಓಪನ್ ಮಾರ್ಕೆಟ್ಟಿನಲ್ಲಿ ಅವರ ಇಷ್ಟದ ಪ್ರಕಾರ ಮಾರಾಟಮಾಡಿಕೊಳ್ಳಬಹುದೆಂದೂ ಇನ್ನುಳಿದ ಶೇ. 60 ರಷ್ಟು ಸಕ್ಕರೆಯನ್ನು ಸರ್ಕಾರಕ್ಕೆ ಒಂದು ನಿಗದಿಯಾದ ಬೆಲೆಯಲ್ಲಿ ಕೊಡಬೇಕೆಂದೂ ತೀರ್ಮಾನ ಆಯಿತು. ಇನ್ನು ಆ ಖುಲ್ಲಾ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡತಕ್ಕ ಸಕ್ಕರೆಯನ್ನು ಟೆಂಡರ್ ಕರೆದು ಅದರಲ್ಲಿ ಯಾರು ಹೈಯೆಸ್ಟ್ ಬಿಡ್ ಮಾಡುತ್ತಾರೋ ಅವರಿಗೆ ಕೊಡಬೇಕೆಂದು ತೀರ್ಮಾನವಾಯಿತು. ಅದರ ಪ್ರಕಾರ ಆ 40 ಪರ್ಸೆಂಟ್ ಸಕ್ಕರೆ ಮಾರಾಟಕ್ಕೆ ಟೆಂಡರನ್ನು ಕರೆದಾಗ ಬೊಂಬಾಯಿನವರೊಬ್ಬರು ಮತ್ತು ಕಲ್ಕತ್ತದವರೊಬ್ಬರು ಹೀಗೆ ಇಬ್ಬರು ಮಾತ್ರ ಟೆಂಡರನ್ನು ಹಾಕಿಕೊಂಡರು. ಈ ಟೆಂಡರುಗಳ ತೀರ್ಮಾನವಾಗತಕ್ಕ ಪ್ರಸಂಗದಲ್ಲಿ ನಮಗೆ ಒಂದೂವರೆ ತಿಂಗಳ ಕಾಲ ಸಕ್ಕರೆ ಸಿಕ್ಕುವುದು ಬಹಳ ಕಷ್ಟವಾಯಿತು. ಆದ್ದರಿಂದ ಆಗ ಸಕ್ಕರೆ ಹಂಚಿಕೆಗೆ ಸ್ವಲ್ಪ ತೊಂದರೆಯಾಯಿತು. ಆಗ ನಮಗೆ ಸಕ್ಕರೆ ಅಗತ್ಯ ಹೆಚ್ಚಾಗಿದ್ದುದರಿಂದ ಓಪನ್ ಮಾರ್ಕೆಟ್ ಸಕ್ಕರೆಯನ್ನು ಕೊಳ್ಳಬೇಕಾಗಿ ಬಂತು. ಆಗ ಸರ್ಕಾರದವರು ಅವರಿಗೆ ಕೊಡಲಾಗಿದ್ದ 40 ಪರ್ಸೆಂಟ್ ಸಕ್ಕರೆಯಲ್ಲಿ ಶೇ. 50 ರಷ್ಟು ಸಕ್ಕರೆಯನ್ನು ಅಂದರೆ 20 ಪರ್ಸೆಂಟ್ ಸಕ್ಕರೆಯನ್ನು ಅವರಿಂದ ಕ್ವಿಂಟಾಲ್ ಒಂದಕ್ಕೆ 400 ರೂಪಾಯಿಗಳ ಪ್ರಕಾರ ಕೊಳ್ಳಬೇಕೆಂದು ಸರ್ಕಾರದವರು ಆಲೋಚನೆ ಮಾಡುತ್ತಿದ್ದ ಕಾಲಕ್ಕೆ 400 ರೂಪಾಯಿಗೆ ಕೊಂಡ ಸಕ್ಕರೆಯನ್ನು 450 ಕ್ಕಾದರೂ ಮಾರದಿದ್ದರೆ ಸರ್ಕಾರಕ್ಕೆ ಹೆಚ್ಚಿನ ಹಾನಿಯಾಗಬಹುದೆಂದು ಆಲೋಚನೆ ಮಾಡುತ್ತಿದ್ದ ಕಾಲಕ್ಕೆ ಓಪನ್ ಮಾರ್ಕೆಟ್‌ನಲ್ಲಿ ಸಕ್ಕರೆ ಕ್ವಿಂಟಾಲಿಗೆ 560 ರಂತೆ ಮಾರಾಟವಾಗುತ್ತಿತ್ತು. ಆಗ ನಮಗೆ ಮದುವೆ ಮಾಡುವವರಿಗೂ ಮತ್ತು ಹೋಟಲುಗಳವರಿಗೂ ಸಕ್ಕರೆಯ ಅಗತ್ಯ ಹೆಚ್ಚಾಗಿತ್ತು. ನಮ್ಮ ಸಕ್ಕರೆಯನ್ನು ಕೊಂಡಿದ್ದ ವರ್ತಕರಿಬ್ಬರೂ ಬಹಳ ದೊಡ್ಡ ವರ್ತಕರು. ಆಗ ಅವರಿಂದ ಸರ್ಕಾರದವರು 400 ರೂಪಾಯಿಗಳ ಪ್ರಕಾರ ಕೊಂಡ ಸಕ್ಕರೆಯನ್ನು ಇಲ್ಲಿ ನಮ್ಮ ಕನ್ಸೂಮರ್ಸಿಗೆ ಕ್ವಿಂಟಾಲಿಗೆ 365 ರೂ. ಪ್ರಕಾರ ಮಾರಾಟ ಮಾಡಿದರೆ ಅದರಿಂದ ಸರ್ಕಾರಕ್ಕೆ ಬಹಳ ಹಾನಿಯಾಗಬಹುದೆಂದು ಹೇಳಿ ಕೊಂಡ ಸಕ್ಕರೆಯನ್ನು ಕ್ವಿಂಟಾಲಿಗೆ 365 ರೂ ಪ್ರಕಾರ ಮಾರಾಟ ಮಾಡಲಾಯಿತು. ಓಪನ್ ಮಾರ್ಕೆಟ್ಟಿನಲ್ಲಿ 450 ರೂಪಾಯಿಗಳಿಗೆ ಸಕ್ಕರೆ ಮಾರಾಟವಾಗುತ್ತಿದ್ದಾಗ ಅದರ ಬೆಲೆ ಇದ್ದಕ್ಕಿದ್ದಂತೆ ಅದು 470 ಕ್ಕೆ ಏರಿತು. ಅವರು ಹೀಗೆ ಓಪನ್ ಮಾರ್ಕೆಟ್ಟಿನಲ್ಲಿ ಅಧಿಕ ಬೆಲೆಗೆ ಸಕ್ಕರೆ ಮಾರಾಟ ಮಾಡುವುದು ಸರಿಯಾದದ್ದಲ್ಲ ಎಂದು ನಾವು ಅವರಲ್ಲಿದ್ದ ಸಕ್ಕರೆಯನ್ನು ಕೊಂಡು ಅದರಲ್ಲಿ 1800 ಕ್ವಿಂಟಾಲ್‌ಗಳನ್ನು ಕ್ವಿಂಟಾಲ್ ಒಂದಕ್ಕೆ 360 ರಂತೆ ಮಾರಾಟ ಮಾಡಿದೆವು. ಅನಂತರ 1500 ಕ್ವಿಂಟಾಲನ್ನು ಕ್ವಿಂಟಾಲ್ ಒಂದಕ್ಕೆ 375 ರಂತೆ ಮಾರಾಟ ಮಾಡಿದೆವು. ನಾವು ಕೊಂಡ ಸಕ್ಕರೆಯಲ್ಲಿ ಕೊಂಚ ಭಾಗವನ್ನು ಕ್ವಿಂಟಾಲಿಗೆ 395ರ ಪ್ರಕಾರ ಕೂಡ ಮಾರಾಟ ಮಾಡಿದ್ದೇವೆ. ಹೀಗೆ ಸರ್ಕಾರದವರು ಹೆಚ್ಚು ಬೆಲೆಗೆ ಸಕ್ಕರೆಯನ್ನು ಕೊಂಡು ಅದನ್ನು ಕಡಮೆ ಬೆಲೆಗೆ ಮಾರಾಟ ಮಾಡಿದರೆ ಅದರಿಂದ ಹೆಚ್ಚಿನ ಹಾನಿಯಾಗಬಹುದೆಂಬುದನ್ನು ಲೆಕ್ಕ ಹಾಕಿದಾಗ ಅದರಿಂದ ಸರ್ಕಾರಕ್ಕೆ ಸುಮಾರು 4 ಅಥವಾ ನಾಲ್ಕೂವರೆ ಲಕ್ಷ ರೂಪಾಯಿಗಳ ಹಾನಿಯಾಗಬಹುದೆಂದು ತಿಳಿಯಬಂತು. ನಮ್ಮಲ್ಲಿ ಈ ಸಕ್ಕರೆ ವ್ಯವಹಾರಕ್ಕೆ 2 ಜೋನುಗಳನ್ನು ಮಾಡಿಕೊಂಡಿದೆ. ಒಂದು ಜೋನಿನಲ್ಲಿ ಸಕ್ಕರೆಯನ್ನು ಕ್ವಿಂಟಾಲು ಒಂದಕ್ಕೆ 140 ರಂತೆ

ಮಾರಾಟ ಮಾಡಲಾಗುತ್ತಿತ್ತು. ಆಗ ಇನ್ನೊಂದು ಜೋನಿನಲ್ಲಿ ಕ್ವಿಂಟಾಲು ಒಂದಕ್ಕೆ 161 ರಂತೆ ಮಾರಾಟ ಮಾಡಲಾಗುತ್ತಿತ್ತು. ಆಗ ಆ ಮೊದಲನೆಯ ಜೋನಿನವರು ನಮಗೂ ಆ ಸಕ್ಕರೆಯನ್ನು 161 ರಂತೆ ಮಾರಾಟ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಅವರು ಹೈಕೋರ್ಟಿಗೆ ರಿಟ್ ಹಾಕಿದರು. ಆಗ ಅಲ್ಲಿಯೂ ಅದೇ ರೀತಿ ಮಾಡಬೇಕೆಂದು ಅವರು ತೀರ್ಮಾನ ಕೊಟ್ಟರು. ಆಗ ಮಾರುಕಟ್ಟೆಯಲ್ಲಿ 161 ಕ್ಕೆ ಕೊಂಡ ಸಕ್ಕರೆ 172ಕ್ಕೆ ಮಾರಾಟವಾಗುತ್ತಿತ್ತು. ಆಗ ನಾವು ನಮ್ಮ ಸಕ್ಕರೆಯನ್ನು ಅಂದರೆ ಓಪನ್ ಮಾರ್ಕೆಟ್ ಸಕ್ಕರೆಯನ್ನು ಕ್ವಿಂಟಾಲಿಗೆ 175 ರಂತೆ ಮಾರಾಟ ಮಾಡಿದೆವು. ಇದರಿಂದ ಸರ್ಕಾರಕ್ಕೆ 3 ಲಕ್ಷ ಉಳಿತಾಯ ಆಯಿತು. ನಮಗೆ ಆ ಮೊದಲನೆ ಓಪನ್ ಮಾರ್ಕೆಟ್ ಸಕ್ಕರೆಯನ್ನು ಹೈರೇಟಿನಲ್ಲಿ ಕೊಂಡು ಅದನ್ನು ಲೋರೇಟಿನಲ್ಲಿ ಮಾರಾಟ ಮಾಡಿದ್ದರಿಂದ ನಾಲ್ಕು ನಾಲ್ಕೂವರೆ ಲಕ್ಷ ಏನು ನಷ್ಟವಾಗಿತ್ತು ಅದು ಇದರಿಂದ ಭರ್ತಿಮಾಡಿಕೊಳ್ಳಲು ಒಂದು ಅವಕಾಶವುಂಟಾಯಿತು. ಆದರೆ ಹಿಂದೆ ಒಮ್ಮೆ ಇದೇ ಪ್ರಶ್ನೆ ಇಲ್ಲಿ ಚರ್ಚೆಗೆ ಬಂದಿದ್ದ ಕಾಲಕ್ಕೆ ಆಗ ಸಾಕಷ್ಟು ವೇಳೆ ಸಿಗದೆ ಇದರ ಪೂರ್ಣ ವಿವರಗಳನ್ನು ತಿಳಿಸಲಿಕ್ಕೆ ಸಾಧ್ಯವಾಗಿರಲಿಲ್ಲ. ಹೀಗೆ ನಾವು ಆ ಓಪನ್ ಮಾರ್ಕೆಟ್ಟಿನಲ್ಲಿ ಹೈರೇಟಿಗೆ ಸಕ್ಕರೆ ಮಾರಾಟವಾಗತಕ್ಕದ್ದನ್ನು ತಡೆಗಟ್ಟಲು ಪ್ರಯತ್ನ ಮಾಡಿದ್ದೇವೆ. ಆದರೆ ನಮಗೆ ಈ ದಿವಸ ಸಕ್ಕರೆ ಹಂಚಿಕೆಗೆ ಬಹಳ ಕಮ್ಮಿ ಬೀಳುತ್ತಿದೆ. ನಮಗೆ ಇಲ್ಲಿ ಒಟ್ಟು ಬೇಕಾಗತಕ್ಕ ಸಕ್ಕರೆ ಎಷ್ಟೆಂದರೆ 50,036 ಟನ್. ಇದರಲ್ಲಿ 13 ಸಾವಿರ ಟನ್ ಖೋತಾಬೀಳುತ್ತಿದೆ. ನಾವು ಡೊಮೆಸ್ಟಿಕ್ ಕನ್‌ಸಂಪ್ಷನ್‌ಗೆ ಎಷ್ಟು ಸಕ್ಕರೆಯನ್ನು ಕೊಡಬೇಕೋ ಅಷ್ಟನ್ನು ಕೊಡುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಹೀಗಾಗಿ ಎಲ್ಲರಿಗೂ ಒಂದೇ ಪ್ರಮಾಣದಲ್ಲಿ ಸಕ್ಕರೆ ಹಂಚುವುದಕ್ಕೆ ಸ್ವಲ್ಪ ತೊಂದರೆಯಾಗಿದೆ.

ಆಯುರ್ವೇದ ಮತ್ತು ಯೂನಾನಿ ಔಷಧಿ ಮಾಡುವವರಿಗೆ ಸಕ್ಕರೆ ಬೇಕಾಗುತ್ತದೆ. ಅದಕ್ಕೆ ಅವರು ಓಪನ್ ಮಾರ್ಕೆಟ್ಟಿಗೆ ಹೋಗಬೇಕು ಎಂದು ಹೇಳಿದರು. ಅದಕ್ಕಾಗಿ ಸಕ್ಕರೆಗೆ ಹೆಚ್ಚು ಬೆಲೆ ಕೊಟ್ಟರೆ, ಔಷಧಿ ಬೆಲೆ ಹೆಚ್ಚಾಗುತ್ತದೆ, ಅದರಿಂದ ಜನಗಳಿಗೆ ಕಷ್ಟವಾಗುತ್ತದೆ ಎಂದು ತಿಳಿದುಕೊಂಡು ಬೇರೆ ಬೇರೆ ಆಯುರ್ವೇದ, ಯೂನಾನಿ ಔಷಧಿ ಮಾಡುವವರೆಲ್ಲರಿಗೂ ಸಕ್ಕರೆ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ನಾವು ಬರೆದಿದ್ದೆವು. ಅದಕ್ಕೆ ಅವರು ನಮಗೆ 17 ಟನ್ ಸಕ್ಕರೆ ಕೊಡಲು ಒಪ್ಪಿದ್ದಾರೆ. ಆದರಿಂದ ನಾವು ಆಯುರ್ವೇದ ಯುನಾನಿ ಔಷಧಿಯನ್ನು ಮಾಡುವವರಿಗೆ ಸಕ್ಕರೆಯನ್ನು ಹಂಚಬೇಕಾಗುತ್ತದೆ. ಆ ಸಕ್ಕರೆ ಅವರಿಗೆ ಕಂಟ್ರೋಲ್ ರೇಟಿನಲ್ಲಿ ಕೊಡುವುದಕ್ಕೆ ಏರ್ಪಾಟು ಮಾಡಿದ್ದೇವೆ. ಬಹಳ ದಿವಸಗಳಿಂದ ಅವರ ಕಷ್ಟ ಇದ್ದದ್ದು ಈಗ ನಿವಾರಣೆ ಆಗಿದೆ.

ಇನ್ನೊಂದು ವಿಷಯ ಈಗ ನಮ್ಮ ರಾಜ್ಯದಲ್ಲಿ ಆಹಾರ ಧಾನ್ಯದ ಬೆಲೆಗಳು ಹೇಗಿವೆ ಎನ್ನುವ ಮಾತನ್ನು ಕೆಲವು ಮಾನ್ಯ ಸದಸ್ಯರು ಕೇಳಿದರು. ಅದನ್ನೂ ಸ್ವಲ್ಪ ಹೇಳುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಬೇರೆ ಬೇರೆ ಬೆಲೆಗಳು ಏನಿವೆ ಆ ಬೆಲೆಗಳನ್ನು ನೋಡಿದಾಗ ಜೋಳದ ಬೆಲೆ ಸರಿಯಾಗಿದೆ. ಅದೇನು ಹೆಚ್ಚಾಗಿಲ್ಲ, 60-65 ರೂಪಾಯಿಗಳು, 70-75 ರೂಪಾಯಿಗಳಿಗೆ ಒಂದು ಕ್ವಿಂಟಾಲಿನಂತೆ ಎಲ್ಲಾ ಕಡೆಗೂ ಜೋಳ ಸಿಕ್ಕುತ್ತದೆ. ಮುಸುಕಿನ ಜೋಳದ ಬೆಲೆ ಒಂದು ಕ್ವಿಂಟಾಲಿಗೆ 60-65 ರೂಪಾಯಿಗಳು ಇದೆ. ರಾಗಿ ಬೆಲೆ ಬಹಳ ಕಡಿಮೆಯಾಗಿದೆ. ಇದರಿಂದ ಜನಗಳಿಗೂ ಅನೂಕೂಲವಾಗಿದೆ. ಸರ್ಕಾರಕ್ಕೂ ಕೂಡ ಅನುಕೂಲವಾಗಿದೆ. ಈ ರೀತಿಯಾಗಿ ಆಹಾರ ಧಾನ್ಯಗಳ ಬೆಲೆಗಳು ಇಳಿಮುಖವಾಗುತ್ತಿವೆ.

ಇನ್ನು ಆಹಾರ ಧಾನ್ಯಗಳ ಸ್ಟಾಕ್ ಡಿಕ್ಲರೇಷನ್ ಬಗ್ಗೆ ಹೇಳುವುದಾದರೆ ನಿಯಮದ ಪ್ರಕಾರ ಯಾರು ಸ್ಟಾಕ್ ಹೋಲ್ಡರುಗಳು ಇರುತ್ತಾರೆಯೋ ಅವರಲ್ಲಿ ಯಾರ ಹತ್ತಿರ 40 ಕ್ವಿಂಟಾಲ್ ಬತ್ತ 25 ಕ್ವಿಂಟಾಲ್ ಅಕ್ಕಿ, ಜೋಳ, ರಾಗಿ ಇರುತ್ತದೆಯೋ ಅಂಥವರು ಪ್ರತಿತಿಂಗಳೂ ಡಿಕ್ಲರೇಷನ್ ಕೊಡಬೇಕೆಂದಿತ್ತು. ಅವರು ಆ ರೀತಿ ಡಿಕ್ಲರೇಷನ್ ಕೊಡದಿದ್ದರೆ ಅಂಥವರ ಮೇಲೆ ಕಾನೂನು ಪ್ರಕಾರ ಕ್ರಮತೆಗೆದುಕೊಂಡು ಅವರಿಗೆ ಶಿಕ್ಷೆಯನ್ನು ವಿಧಿಸುವಂತಹ ಅವಕಾಶ ಇತ್ತು. ಈ ಕಾನೂನು ಸರಿಯಾಗಿದ್ದರೂ ಕೂಡ ರೈತರು ಬಹಳ ಜನ ಓದಿಲ್ಲ. ಅವರಿಗೆ ಕಾನೂನು ಗೊತ್ತಿಲ್ಲ ಫಾರಂ ಮತ್ತು ಸ್ಟಾಕ್ ರಿಜಿಸ್ಟರುಗಳನ್ನು ಯಾವ ರೀತಿ ಮೇಂಟೇನ್ ಮಾಡಬೇಕೆಬುದು ಅವರಿಗೆ ಗೊತ್ತಿಲ್ಲ, ಇತ್ಯಾದಿ ಅನೇಕ ತೊಂದರೆಗಳು ರೈತರಿಗೆ ಇದರಿಂದ ಇವೆ ಎಂಬುದು ಕೇಳಿ ಬಂತು. ಇದನ್ನೆಲ್ಲಾ ವಿಚಾರ ಮಾಡಿ ನೋಡಿದಾಗ ಈ ಕಾನೂನು ತಿದ್ದುಪಡಿ ಮಾಡಬೇಕೆಂದು ತಿಳಿದು ಅದಕ್ಕೆ ಕೇಂದ್ರ ನಾವು ಸರ್ಕಾರದವರ ಒಪ್ಪಿಗೆಯನ್ನು ಕೇಳಿದ್ದೆವು. ಅದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆ. ಈಗ ತಿದ್ದುಪಡಿಯ ಪ್ರಕಾರ ಇದುವರೆಗೆ ಇದ್ದಂತೆ ಪ್ರತಿ ತಿಂಗಳು ಡಿಕ್ಲರೇಷನ್ ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ. ಅದರ ಬದಲು 6 ತಿಂಗಳಿಗೊಮ್ಮೆ ಡಿಕ್ಲರೇಷನ್ ಕೊಟ್ಟರೆ ಸಾಕು ಎಂದು ಮಾಡಿದ್ದೇವೆ. ರೈತರಿಗೆ ಇದರಿಂದ ಸಹಾಯವಾಗುತ್ತದೆ,

(ಶ್ರೀ ಬಿ. ಡಿ. ಜತ್ತಿ)

ಯಾವ ತೊಂದರೆಯೂ ಆಗುವುದಿಲ್ಲ, ಬೇಸಿಗೆ ಬೆಳೆ, ಮೊದಲನೇ ಬೆಳೆ ಹೀಗೆ ಎರಡು ಬೆಳೆ ಅದರೂ ಕೂಡ ಒಮ್ಮೆ ಡಿಕ್ಲರೇಷನ್ ಕೊಟ್ಟಮೇಲೆ ಪುನಃ ಅವರು ಕೊಡಬೇಕಾಗಿಲ್ಲ. ಈ ರೀತಿಯಾಗಿ ರೈತರಿಗೆ ಇರುವ ಕಷ್ಟವನ್ನು ತಪ್ಪಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ.

ಇನ್ನು ಖಾನಾಪುರದ ಮಾನ್ಯ ಸದಸ್ಯ ಸದಸ್ಯರು ಅವರ ತಾಲ್ಲೂಕಿನಲ್ಲಿ ಲೆವಿ ಸಂಗ್ರಹ ಮಾಡುವುದರಲ್ಲಿ ಬಹಳ ಹಿಂಸೆಯಾಗಿದೆ ಎಂದು ಹೇಳಿದರು. ನನಗೆ ಗೊತ್ತಿರುವ ಪ್ರಕಾರ ಅಂಥಾದ್ದೇನೂ ಅಲ್ಲಿ ಕಾಣುವುದಿಲ್ಲ. ಲೆವಿ ವಸೂಲು ಮಾಡಿರುವ ಬಗ್ಗೆ ಮಾನ್ಯ ಸದಸ್ಯರುಗಳಿಗೆ ಅಂಕಿಅಂಶಗಳನ್ನು ಹೇಳುತ್ತೇನೆ. 1965-66 ರಲ್ಲಿ ನಾವು ಆಹಾರ ಧಾನ್ಯವನ್ನು ಲೆವಿಮೂಲಕ 47.8 ಪರ್ಸೆಂಟ್ ಲೆವಿಯನ್ನು ವಸೂಲು ಮಾಡಿದ್ದೇವೆ. 66-67 ನೇ ಸಾಲಿನಲ್ಲಿ 50.8 ಪರ್ಸೆಂಟ್ ವಸೂಲು ಮಾಡಿದ್ದೇವೆ. ಈ ಸಾಲಿನಲ್ಲಿ ಇದುವರೆಗೆ 44 ಪರ್ಸೆಂಟ್ ವಸೂಲು ಮಾಡಿದ್ದೇವೆ. 50 ಪರ್ಸೆಂಟ್‌ಗಿಂತ ಕಡಿಮೆ ವಸೂಲು ಮಾಡಿದ್ದೇವೆ. ರೈತರಿಗೆ ಲೆವಿ ವಸೂಲು ಮಾಡುವುದಕ್ಕೆ ಯಾವ ಹೆರಾಸ್‌ಮೆಂಟೂ ಮಾಡುತ್ತಿಲ್ಲ. ಹೆರಾಸ್‌ಮೆಂಟ್ ಮಾಡುವುದು ನಿಶ್ಚಯವಾಗಿದ್ದರೆ 100 ಪರ್ಸೆಂಟ್ ಲೆವಿ ವಸೂಲಿ ಬರಬೇಕಾಗಿತ್ತು, ಯಾವ ಹೆರಾಸ್‌ಮೆಂಟೂ ಇಲ್ಲದೆ ಇದ್ದುದರಿಂದ 50 ಪರ್ಸೆಂಟಿಗಿಂತ ಕಡಿಮೆ ಬಂದಿದೆ. ಆದ್ದರಿಂದ ಮಾನ್ಯ ಸದಸ್ಯರು ಉತ್ಪ್ರೇಕ್ಷೆಮಾಡಿ ಲೆವಿ ವಸೂಲಿಯಲ್ಲಿ ಹಿಂಸೆ ಮಾಡುತ್ತಿದ್ದಾರೆ ಎಂದು ಹೇಳಿದ್ದನ್ನು ಒಪ್ಪುವುದಕ್ಕಾಗುವುದಿಲ್ಲ. ಈ ಲೆವಿ ಕಾನೂನನ್ನೂ ಜಾರಿಗೆ ತರುವಾಗ ತೊಂದರೆಗಳಿದ್ದರೆ ಅದನ್ನು ತಾಲ್ಲೂಕು ಬೋರ್ಡಿನವರಾಗಲೀ, ಗ್ರಾಮ ಪಂಚಾಯಿತಿಯವರಾಗಲೀ ಸರ್ಕಾರದ ಗಮನಕ್ಕೆ ತಂದರೆ ಅದನ್ನು ಪರಿಹರಿಸುವುದಕ್ಕೆ ನಾವು ಒಪ್ಪಿದ್ದೇವೆ. ಬೆಳೆ ಆಗಿದ್ದರೆ ಲೆವಿ ತೆಗೆದುಕೊಳ್ಳಬೇಕು, ಬೆಳೆ ಆಗದೆ ಲೆವಿ ಕೊಡುವುವಕ್ಕೆ ಶಕ್ತಿ ಇಲ್ಲದಿದ್ದರೆ ಅಂಥಾ ಕಡೆ ಲೆವಿ ತೆಗೆದುಕೊಳ್ಳುವುದಿಲ್ಲ ಎಂದು ಅದನ್ನೂ ಒಪ್ಪಿದ್ದೇವೆ. ಅದಕ್ಕಿಂತ ಹೆಚ್ಚು ಈ ಲೆವಿ ಕಾನೂನು ಸಡಿಲಮಾಡುವುದು ನನಗೆ ಕಾಣುವುದಿಲ್ಲ. ಈ ಲೆವಿ ಕಾನೂನೇ ಬೇಡ ಎಂದು ಅಸೆಂಬ್ಲಿಯಲ್ಲಿ ಹೇಳಿದ ಕೂಡಲೇ, ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು, ಅದರಿಂದ ಹೆರಾಸ್‌ಮೆಂಟ್ ಆಗುತ್ತಿದೆ ಎಂದು ಹೇಳಿದರೆ ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಿಗೆ ಜನಗಳ ಸಂಪರ್ಕ ಯಾವ ರೀತಿ ಇದೆಯೋ ಅದೇ ರೀತಿ ನಮಗೂ ಇದೆ. ನಾನೂ ಕೂಡ ಜನಗಳಿಂದ ಚುನಾಯಿತನಾಗಿ ಬಂದಿದ್ದೇನೆ ಆದ್ದರಿಂದ ನಾನು ಕೂಡ ಜನಗಳಿಗೆ ಸಂತೋಷವಾಗುವ ರೀತಿಯಲ್ಲಿ, ಸಮಾಧಾನವಾಗುವ ರೀತಿಯಲ್ಲಿ ಕೆಲಸಗಳನ್ನು ಮಾಡಬೇಕಾಗುತ್ತದೆ. ನಾನು ಮುಂದೆ ಮತ್ತೆ ಚುನಾವಣೆಗೆ ನಿಲ್ಲಬೇಕಾಗುತ್ತದೆ. ನಾನೇನು ಸನ್ಯಾಸಿಯಾಗಿ ಹೋಗಬೇಕೆಂದೇನೂ ಇಲ್ಲ. ಈ ಲೆವಿಯನ್ನು ವಸೂಲು ಮಾಡುವುದರಲ್ಲಿ ಸ್ವಲ್ಪ ಗಲಾಟೆ ಮಾಡುತ್ತಾರೆ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಬರೆದಿರತಕ್ಕ ಪತ್ರವನ್ನು ನಾನು ಓದಿದ್ದೇನೆ. ಈ ವಿಚಾರದಲ್ಲಿ ಏನು ನಡೆಯುತ್ತಿದೆ ಎನ್ನುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ ಮತ್ತು ಸರ್ಕಾರಕ್ಕೂಗೊತ್ತಿದೆ. ಆದ್ದರಿಂದ ಲೆವಿ ವಸೂಲು ಮಾಡುವುದರಲ್ಲಿ ಏನು ನಡೆಯುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದು ವೇದವಾಕ್ಯ, ಸತ್ಯಸಂಗತಿ ಎಂದು ಒಪ್ಪಲಿಕ್ಕೆ ಸಿದ್ಧವಾಗಿದ್ದರೂ ಕೂಡ ಎಲ್ಲಿ ಅಸಮಾಧಾನ, ಅನ್ಯಾಯವಾಗಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದರೆ ಅದು ಸರಿಯೇ ಹೇಗೆ ಎಂಬುದನ್ನು ಪುನಃ ಪರಿಶೀಲಿಸಿ ಚೌಕಾಸಿ ಮಾಡುತ್ತೇವೆ. ಅದನ್ನು ನಾವು ಸರಿಪಡಿಸುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ಮಾನ್ಯ ಸದಸ್ಯರು ತಮಗೆ ಕಾಗದ ಬರೆದಿದ್ದರಲ್ಲಿ ಸತ್ಯಾಂಶ ಇದೆಯೆಂದು ಅವರಿಗೆ ತಿಳಿಸಿದ್ದೀರಾ? ಮತ್ತು ವಿರೋಧ ಪಕ್ಷದವರು ಬರೆಯುವ ಕಾಗದಗಳು ಸುಳ್ಳು ಎಂದು ಹೇಳುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ತಾವು ಹೇಳಿದ್ದು ಅಸತ್ಯ ಎಂದು ಹೇಳುವುದಿಲ್ಲ. ಅದು ಸತ್ಯ ಎಂದು ತಿಳಿದುಕೊಂಡು ಅದರ ಬಗ್ಗೆ ಚೌಕಾಸಿಮಾಡುತ್ತೇವೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ನಾಡಕರ್ಣಿಯವರು ನಮ್ಮ ಕಾರವಾರ ಜಿಲ್ಲೆಗೆ ಆಹಾರ ಧಾನ್ಯದ ಅಲಾಟ್‌ಮೆಂಟ್ ಸರಿಯಾಗಿ ಕೊಟ್ಟಿಲ್ಲ ಎಂದು ಹೇಳಿದರು. ಕಾರವಾರ ಜಿಲ್ಲೆಗೆ ಮಂತ್ರಿ ಅಲಾಟ್‌ಮೆಂಟ್ ಎಷ್ಟು ಕೊಟ್ಟಿದೆ ಎಂಬುದನ್ನು ನಾನು ಹೇಳುತ್ತೇನೆ. ಅಕ್ಕಿ 1250 ಕ್ವಿಂಟಾಲ್, ಗೋಧಿ 600 ಕ್ವಿಂಟಾಲ್. ಮೈಲೋ 350 ಕ್ವಿಂಟಾಲ್. ಸಕ್ಕರೆ 1470 ಕ್ವಿಂಟಾಲ್ ಕೊಟ್ಟಿದೆ. ನಾವು ಕೊಡತಕ್ಕ ಕೋಟಾವನ್ನು ಕಡಿಮೆ ಮಾಡುವುದಕ್ಕೆ ಹೋಗಿಲ್ಲ. ಅಂಕೋಲಕ್ಕೆ ಸ್ಪೆಷಲ್ ಅಲಾಟ್‌ಮೆಂಟ್ ಮಾಡಿದ್ದೇವೆ ಅಂಕೋಲಕ್ಕೆ ಜನವರಿ, ಫೆಬ್ರವರಿ, ಮಾರ್ಚಿ ಈ ಮೂರು ತಿಂಗಳಲ್ಲಿ 1 0 ಕ್ವಿಂಟಾಲ್ ಅಕ್ಕಿಯನ್ನು ಅಲಾಟ್‌ಮಾಡಿದೆ. ಹಾಗೆಯೇ 130 ಕ್ವಿಂಟಾಲ್ ಗೋಧಿಯನ್ನು ಕೊಟ್ಟಿದೆ. ಕುಮಟಕ್ಕೆ 3 ತಿಂಗಳಿಗೆ 170 ಕ್ವಿಂಟಾಲ್ ಅಕ್ಕಿಯನ್ನು ಕೊಟ್ಟಿದೆ ಅಂಕೋಲಕ್ಕೆ

ಫೆಬ್ರವರಿ ತಿಂಗಳಿನಲ್ಲಿ 50 ಕ್ವಿಂಟಾಲ್ ಮೈಲೋ ಕೊಟ್ಟಿದೆ. ಕುಮಟಕ್ಕೆ 65 ಕ್ವಿಂಟಾಲ್ ಮೈಲೋ ಕೊಟ್ಟಿದೆ. ಅಂಕೋಲಕ್ಕೆ ಜನವರಿ ತಿಂಗಳಿನಲ್ಲಿ 60 ಕ್ವಿಂಟಾಲ್ ಮೈಲೋ ಕೊಟ್ಟಿದೆ ಫೆಬ್ರವರಿ ತಿಂಗಳಿನಲ್ಲಿ 50 ಕ್ವಿಂಟಾಲ್ ಕೊಟ್ಟಿದೆ. ಮಾರ್ಚಿ ತಿಂಗಳಿನಲ್ಲಿ 65 ಕ್ವಿಂಟಾಲ್ ಕೊಟ್ಟಿದೆ. ಅಂಕೋಲಕ್ಕೆ ಮೈಲೋ ಫೆಬ್ರವರಿ ಮತ್ತು ಮಾರ್ಚಿ ತಿಂಗಳು ಸೇರಿ 125 ಕ್ವಿಂಟಾಲ್ ಕೊಟ್ಟಿದೆ. ಕುಮಟಾಕ್ಕೆ 3 ತಿಂಗಳಿಗೆ ಮೈಲೋ 185 ಕ್ವಿಂಟಾಲ್ ಕೊಟ್ಟಿದೆ. ಇದನ್ನು ನೋಡಿದರೆ ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ ಎಷ್ಟರಮಟ್ಟಿಗೆ ನಾರ್ತ್ ಕೆನರಾ ಜಿಲ್ಲೆಗೆ ಆಹಾರ ಧಾನ್ಯವನ್ನು ಒದಗಿಸಿ ಕೊಟ್ಟಿದೆ ಎಂಬುದು. ಎಲ್ಲೆಲ್ಲಿ ಆಹಾರದ ಅಭಾವ ಇದೆ, ಎಲ್ಲೆಲ್ಲಿ ಕಾರ್ಮಿಕರ ಸಂಖ್ಯೆ ಜಾಸ್ತಿ ಇದೆ ಆ ಪ್ರದೇಶಗಳಿಗೆ ಜನಗಳಿಗೆ ಸಾಧ್ಯವಾದಷ್ಟು ಆಹಾರ ಧಾನ್ಯವನ್ನ ಒದಗಿಸಿದೆ. ನಮ್ಮ ರಾಜ್ಯದಲ್ಲಿ ಸುಮಾರು 2½ ಕೋಟಿ ಜನಸಂಖ್ಯೆ ಇದೆ. ಎಲ್ಲರಿಗೂ ನಾವು ಆಹಾರ ಧಾನ್ಯವನ್ನು ಒದಗಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಈಗ ನಮ್ಮಲ್ಲಿ 10 ಪರ್ಸೆಂಟ್ ಆಹಾರ ಧಾನ್ಯದ ಕೊರತೆ ಇದೆ. ಆ 10 ಪರ್ಸೆಂಟ್ ಕೊರತೆಯನ್ನು ಯಾವರೀತಿಯಿಂದಲಾದರೂ ಪೂರೈಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಪ್ರತಿಯೊಬ್ಬರಿಗೂ ನಾವು ಆಹಾರ ಧಾನ್ಯವನ್ನು ಕೊಡುತ್ತೇವೆ ಎಂದು ಹೇಳಿದರೆ ಅದು ಆಗುವುದಿಲ್ಲ.

ಇನ್ನು ಶ್ರೀಮಾನ್ ಭಾಸ್ಕರಶೆಟ್ಟರು ದಕ್ಷಿಣಕನ್ನಡ ಜಿಲ್ಲೆಯ ಬಗ್ಗೆ ಬಹಳ ಘಟ್ಟಿ ಘಟ್ಟಿಯಾಗಿ ಮಾತನಾಡಿದರು. ನಮ್ಮ ಜಿಲ್ಲೆಯವರು ಕೊಡುವಷ್ಟು ಲೆವಿಯನ್ನು ಬೇರೆ ಯಾವ ಜಿಲ್ಲೆಯವರು ಸಹ ಕೊಡುವುದಿಲ್ಲ, ನಮ್ಮ ಜಿಲ್ಲೆಯವರು ಸುಮಾರು 78 ಪರ್‌ಸೆಂಟ್ ಕೊಟ್ಟಿದ್ದಾರೆಂದು ಬಹಳ ಘಟ್ಟಿಯಾಗಿ ಈ ಸಭೆಯಲ್ಲಿ ಹೇಳಿದರು. ಅವರು ಆ ರೀತಿ ಹೇಳಿದ್ದರಲ್ಲಿ ಯಾವ ಸತ್ಯಾಂಶವೂ ಇಲ್ಲ. ಈ ಬಗ್ಗೆ ಅಂಕಿಅಂಶಗಳನ್ನು ಹೇಳುತ್ತೇನೆ. 1965-66ರಲ್ಲಿ ಲೆವಿಯನ್ನು 32 ಸಾವಿರ ಕ್ವಿಂಟಾಲ್ ವಸೂಲು ಮಾಡಬೇಕೆಂಬ ಗುರಿಯಿತ್ತು. ಆದರೆ ಸಂಗ್ರಹವಾಗಿದ್ದು 14,500 ಕ್ವಿಂಟಾಲ್ ಮಾತ್ರ ಅಂದರೆ 46 ಪರ್‌ಸೆಂಟ್ ಆಯಿತು. 1966-67ರಲ್ಲಿ 28 ಪರ್‌ಸೆಂಟ್ ಸಂಗ್ರಹವಾಗಿದೆ. 1967-68ರಲ್ಲಿ 33 ಪರ್‌ಸೆಂಟ್ ಸಂಗ್ರಹವಾಗಿದೆ. ಈ ರೀತಿ ಅಂಕಿಅಂಶಗಳು ಇರುವುದರಿಂದ ಮಾನ್ಯ ಸದಸ್ಯರು 78 ಪರ್‌ಸೆಂಟ್ ಕೊಟ್ಟಿದ್ದೇವೆಂದು ಹೇಳುತ್ತಿರುವುದು ಸರಿಯಲ್ಲ. ಆ ರೀತಿ ಹೇಳುವುದರಲ್ಲಿ ಸತ್ಯಾಂಶವಿಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಬೇರೆ ಜಿಲ್ಲೆಯವರಿಗಿಂತ ನಾವು ಹೆಚ್ಚು ಕೊಟ್ಟಿರುವುದು ಹೌದೋ ಅಲ್ಲವೋ ಎಂಬುದನ್ನು ಹೇಳಿ.

ಶ್ರೀ ಬಿ. ಡಿ. ಜತ್ತಿ.—ಬೇರೆ ಜಿಲ್ಲೆಯವರಿಗಿಂತ ನಾವು ಜಾಸ್ತಿ ಕೊಟ್ಟಿದ್ದೇವೆಂದು ನೀವು ಹೇಳಿದ್ದರೆ ನಾನು ಒಪ್ಪುತ್ತಿದ್ದೆ. ಆದರೆ 78 ಪರ್‌ಸೆಂಟ್‌ವರೆಗೆ ಕೊಟ್ಟಿದ್ದೇವೆಂದು ಹೇಳಿದ್ದು ಸರಿಯಲ್ಲ. ನಮ್ಮ ಮೈಸೂರು ಸಂಸ್ಥಾನವನ್ನು ಲೆವಿ ವಿಚಾರದಲ್ಲಿ ಸರಾಸರಿ ತೆಗೆದುಕೊಂಡರೆ 50 ಪರ್‌ಸೆಂಟ್ ವಸೂಲು ಮಾಡುತ್ತಿದ್ದೇವೆ. ಅದಕ್ಕಿಂತ ಜಾಸ್ತಿ ವಸೂಲು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ರೀತಿ ಅವರೇಜ್ 50 ಪರ್‌ಸೆಂಟ್ ಇರುವಾಗ ಮಾನ್ಯ ಸದಸ್ಯರ ಜಿಲ್ಲೆಯಲ್ಲಿ 1965-66ರಲ್ಲಿ ಕೇವಲ 46 ಪರ್‌ಸೆಂಟ್, 1966-67ರಲ್ಲಿ 28 ಪರ್‌ಸೆಂಟ್, 1967-68ರಲ್ಲಿ 33 ಪರ್‌ಸೆಂಟ್ ಸಂಗ್ರಹವಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ತಪ್ಪು ಕಲ್ಪನೆ ಇಟ್ಟುಕೊಂಡು ಈ ಸಭೆಯಲ್ಲಿ ಗೊಂದಲ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಇನ್ನು ಒಂದು ವಿಚಾರವನ್ನು ಹೇಳಬೇಕಾಗಿದೆ. ಏನೆಂದರೆ ಮೊನ್ನೆ ಆ ಕಡೆಯ ಮಾನ್ಯ ಸದಸ್ಯರಾದ ಶ್ರೀ ಭಾಸ್ಕರಶೆಟ್ಟರಿಗೂ ಈ ಕಡೆಯ ಸದಸ್ಯರಾದ ಶ್ರೀ ವಿಠಲದಾಸ ಶೆಟ್ಟರಿಗೂ ವಾಗ್ಯುದ್ಧವಾಯಿತು. ಆ ಬಗ್ಗೆ ಒಂದು ವಿಚಾರವನ್ನು ಹೇಳಬೇಕಾಗಿದೆ. ಮಂಗಳೂರು ಜಿಲ್ಲೆ ಕೇರಳಾ ರಾಜ್ಯಕ್ಕೆ ಸಮೀಪದಲ್ಲಿ ಇದೆ. ಕೇರಳಾದಲ್ಲಿ ಅಕ್ಕಿಯ ಬೆಲೆ ಜಾಸ್ತಿ ಇದೆ. ಎಷ್ಟು ಪ್ರಯತ್ನ ಮಾಡಿದರೂ ಸಹ ಮಂಗಳೂರು ಜಿಲ್ಲೆಯಿಂದ ಕೇರಳಾ ರಾಜ್ಯಕ್ಕೆ ಅಕ್ಕಿಯು ಕಳ್ಳಸಾಗಾಣಿಕೆಯಿಂದ ಹೋಗುತ್ತಿರುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿ ಹೋಗುವುದನ್ನು ತಪ್ಪಿಸಲು ನಾವು ಸಹ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಸಾಕಷ್ಟು ಸಿಬ್ಬಂದಿಗಳನ್ನು ನೇಮಕ ಮಾಡಿದ್ದೇವೆ. ಸಾಕಷ್ಟು ಪೋಲೀಸ್ ಸ್ಕ್ವಾಡ್‌ನ್ನು ಇಟ್ಟಿದ್ದೇವೆ. ನಾವು ಎಷ್ಟೇ ಪ್ರಯತ್ನ ಮಾಡಿದರೂ ಸಹ ಸಂಪೂರ್ಣವಾಗಿ ಅಕ್ಕಿಯು ಕಳ್ಳಸಾಗಾಣಿಕೆಯಿಂದ ಹೋಗುತ್ತಿರುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಆ ರೀತಿ ಸಂಪೂರ್ಣವಾಗಿ ಹೋಗುವುದನ್ನು ತಪ್ಪಿಸಬೇಕಾದರೆ ಮಂಗಳೂರಿಗೂ ಕೇರಳಾ ರಾಜ್ಯಕ್ಕೂ ಇರುವ ಅಂತರದಲ್ಲಿ ಅಂದರೆ ನೂರಾರು ಮೈಲಿಯ ಸುತ್ತಮುತ್ತಲೂ ಸಹ ಪೋಲೀಸಿನವರನ್ನು ಇಡಬೇಕಾಗುತ್ತದೆ, ಇದು ಸಾಧ್ಯವಿಲ್ಲದ ಮಾತು. ಆದ್ದರಿಂದ ಈ ವಿಚಾರದಲ್ಲಿ ಈ ಮನೆಯ ಕಾಂಗ್ರೆಸ್ ಸದಸ್ಯರುಗಳು ಮತ್ತು ವಿರೋಧ ಪಕ್ಷದ ಸದಸ್ಯರುಗಳು ಒಬ್ಬರಮೇಲೆ ಒಬ್ಬರು ತಪ್ಪು ಹಾಕಿ ಮಾತನಾಡುವುದು ಸರಿಯಲ್ಲ. ಒಬ್ಬ

(ಶ್ರೀ ಬಿ. ಡಿ. ಜತ್ತಿ)

ವ್ಯಕ್ತಿ ಮಂಗಳೂರು ಗಡಿಯಿಂದ ಕೇರಳಾ ಗಡಿಗೆ 10 ಕೆ. ಜಿ. ಅಕ್ಕಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿದೆ. ಇದೇ ಅನುಕೂಲವನ್ನು ಕೆಲವು ವರ್ತಕರು ಉಪಯೋಗಿಸಿಕೊಂಡು ನೂರಾರು ಜನ ಕೂಲಿಯವರನ್ನು ಉಪಯೋಗಿಸಿಕೊಂಡು ಅಕ್ಕಿಯನ್ನು ಸಾಗಿಸುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ನಮ್ಮ ಕಡೆಯ ಪೋಲೀಸಿನವರು ಸಾಧ್ಯವಾದಮಟ್ಟಿಗೂ ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಇನ್ನು ರೈತರು ತಮ್ಮ ಪಾಲಿನ ಲೆವಿಯನ್ನು ಕೊಟ್ಟಮೇಲೂ ಸಹ ಉಳಿದ ಧಾನ್ಯವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೆ ಅವಕಾಶವಾಗುತ್ತಿಲ್ಲ, ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರುಗಳು ಅನೇಕರು ಹೇಳಿದರು. ಇನ್ನುಮೇಲೆ 6 ತಿಂಗಳಿಗೆ ಒಂದು ಸಾರಿ ಡಿಕ್ಲರೇಷನ್ ಕೊಡಬೇಕೆಂದು ಮಾಡಿರುವುದರಿಂದ ರೈತರು ತಮ್ಮ ಧಾನ್ಯವನ್ನು ಎಲ್ಲಿಗೆ ಬೇಕಾದರೂ ಸಹ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೆ ತೊಂದರೆ ಬರುವುಲ್ಲ.

ಇನ್ನು ಚೆಕ್‌ಪೋಸ್ಟ್‌ಗಳು ಎಲ್ಲಾ ಕಡೆಗಳಲ್ಲಿಯೂ ಇವೆ. ಕೆಲವು ಚೆಕ್‌ಪೋಸ್ಟ್‌ಗಳಲ್ಲಿ ಬಹಳ ಅನ್ಯಾಯವಾಗುತ್ತಿದೆಯೆಂದು ಕೆಲವು ಸದಸ್ಯರುಗಳು ಹೇಳಿದರು.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾಮೂಲು ಪೋಸ್ಟ್‌ಗಳಾಗಿವೆ.

ಶ್ರೀ ಬಿ. ಡಿ. ಜತ್ತಿ.—ಯಾರು ಯಾರು ಎಷ್ಟೆಷ್ಟು ಮಾಮೂಲು ಕೊಡುತ್ತಿದ್ದಾರೆಂಬುದು ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ. ಈ ಬಗ್ಗೆ ಮಾನ್ಯ ಸದಸ್ಯರು ಹೆಚ್ಚಿನ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸಿಕೊಟ್ಟರೆ ವಿಚಾರ ಮಾಡಲಾಗುತ್ತದೆ. ಫುಡ್ ಸೆಲ್‌ನವರಿಗೆ ಗೊತ್ತಿಲ್ಲದ್ದು, ಸಿ. ಐ. ಡಿ. ಅವರಿಗೆ ಗೊತ್ತಿಲ್ಲದ್ದು, ಪೋಲೀಸಿನವರಿಗೆ ಗೊತ್ತಿಲ್ಲದ್ದು, ಅಧಿಕಾರಿಗಳಿಗೆ ಗೊತ್ತಿಲ್ಲದ್ದು ಮಾನ್ಯ ಭಾಸ್ಕರಶೆಟ್ಟರ್ ಅವರಿಗೆ ಗೊತ್ತಿರುವಂತಿದೆ. ನಮ್ಮ ಅಧಿಕಾರಿಗಳು ಈ ಬಗ್ಗೆ ಬಹಳಷ್ಟು ಚೆಕ್ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಮಾಮೂಲು ನಡೆಯುತ್ತಿದೆಯೆಂದು ಸುಮ್ಮನೆ ಹೇಳಿದರೆ ಪ್ರಯೋಜನವಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮೊನ್ನೆ ನಾನು ಹೇಳಿದ ವಿಷಯದ ಬಗ್ಗೆ ಚೆಕ್ ಮಾಡಿ ನೋಡಿ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳಿದ ವಿಷಯದಲ್ಲಿ ಚೆಕ್ ಮಾಡುವುದು ಕಷ್ಟವಾಗುತ್ತದೆ. ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿದರೆ ಚೆಕ್ ಮಾಡಬಹುದು.

ಶ್ರೀ ಅಜೀಜ್ ಶೇಠ್ (ನರಸಿಂಹರಾಜ).—ಮಾನ್ಯ ಭಾಸ್ಕರಶೆಟ್ಟರು ಹೇಳಿದ ಮಾಹಿತಿಯಲ್ಲಿ ಏನೂ ಚೆಕ್ ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಮಾನ್ಯ ಭಾಸ್ಕರಶೆಟ್ಟರು ಕಿವಿಯಿಂದ ಕೇಳಿದ, ತಾವೇ ನೋಡಿದ ವಿಷಯಗಳನ್ನು ಹೇಳುತ್ತಿದ್ದಾರೆ. ಅಂದ ಮೇಲೆ ಅವರು ಹೇಳುತ್ತಿರುವುದು ಸರಿಯಿಲ್ಲವೆಂದು ತಾವು ಹೇಳುವುದಾದರೆ ಫುಡ್ ಡಿಪಾರ್ಟ್‌ಮೆಂಟ್‌ನ್ನು ಅಬಾಲಿಶ್ ಮಾಡಿ ನಮಗೆ ಅಧಿಕಾರವನ್ನು ವಹಿಸಿಕೊಡಿ, ನಾವು ತನಿಖೆ ಮಾಡಿ ರಿಪೋರ್ಟ್ ತಂದು ಕೊಡುತ್ತೇವೆ. ಈ ಸಭೆಯಲ್ಲಿ ಮಾನ್ಯ ಸದಸ್ಯರುಗಳು ಏನಾದರೂ ಹೇಳಿದರೆ ಅದರಲ್ಲಿ ಸತ್ಯಾಂಶವಿದೆಯೆಂದು ಸರ್ಕಾರದವರು ತಿಳಿದುಕೊಂಡು ತನಿಖೆ ಮಾಡಿಸುವುದು ಒಳ್ಳೆಯದು.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಅಜೀಜ್‌ಶೇಠ್ ಅವರಾಗಲೀ, ಮಾನ್ಯ ಭಾಸ್ಕರಶೆಟ್ಟರ ಅವರಾಗಲೀ ಇಂತಹ ಕಡೆ ತಪ್ಪು ನಡೆದಿದೆ ಎಂಬ ಬಗ್ಗೆ ಮಾಹಿತಿಯನ್ನು ಒದಗಿಸಿಕೊಟ್ಟರೆ ಸ್ಪೆಷಲ್ ಅಫೀಸರನ್ನು ನೇಮಕ ಮಾಡಿ ತನಿಖೆ ಮಾಡಿಸುತ್ತೇನೆ. ಮಾನ್ಯ ಸದಸ್ಯರು ಹೇಳುವ ವಿಚಾರದಲ್ಲಿ ತನಿಖೆ ಮಾಡಿಸುವುದಿಲ್ಲವೆಂದು ಹೇಳುವುದಿಲ್ಲ. ಎಲ್ಲೋ ಒಂದಿಬ್ಬರು ಅಧಿಕಾರಿಗಳು ಲಂಚ ತೆಗೆದುಕೊಂಡರೆ ಮೈಸೂರು ರಾಜ್ಯದಲ್ಲಿರುವ ಎಲ್ಲಾ ಅಧಿಕಾರಿಗಳು ಸಹ ಲಂಚ ತೆಗೆದುಕೊಳ್ಳುತ್ತಾರೆ. ಎಲ್ಲಾ ಕಡೆಯಲ್ಲಿಯೂ ಮಾಮೂಲು ನಡೆಯುತ್ತಿದೆಯೆಂದು ಹೇಳುವುದು ಸರಿಯಲ್ಲ. ಎಲ್ಲಿ ತಪ್ಪಾಗಿದೆ ಅಲ್ಲಿ ತಡೆಯಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಮಾನ್ಯ ಸದಸ್ಯರುಗಳು ಸುಮ್ಮನೆ ಜಾರೆಂಜ್ ಮಾಡದೆ ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿದರೆ ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮೊನ್ನೆ ನಾನು ಹೇಳಿದ ವಿಷಯಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ತಾವು ನನಗೆ ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಘಟ್ಟಿಯಾಗಿ ಹೇಳುತ್ತೇನೆ. ಆ ರೀತಿ ಕ್ರಮ ಕೊಳ್ಳುವ ವಿಚಾರದಲ್ಲಿ ಹಿಂದುಮುಂದು ನೋಡುವುದಿಲ್ಲ.

ಇನ್ನು ಮಾನ್ಯ ಸದಸ್ಯರುಗಳು ವಲಯಗಳ ಬಗ್ಗೆ ಹೇಳಿದರು. ಮೈಸೂರು ರಾಜ್ಯದ ಅಭಿಪ್ರಾಯ ಮೊದಲಿನಿಂದಲೂ ಸಹ ವಲಯ ಪದ್ಧತಿ ಇರಬಾರದು ಎಂಬುದೇ ಆಗಿದೆ. ಇದೇ ವಿಚಾರವಲ್ಲಿ ಮೊನ್ನೆ ದೆಹಲಿಯಲ್ಲಿ ನಡೆದ ಸಭೆಯಲ್ಲಿಯೂ ಸಹ ಹೇಳಿದ್ದೇವೆ. ಕೇಂದ್ರ ಸರ್ಕಾರದ ಮೇಲೆ ಈ ವಿಚಾರದಲ್ಲಿ ಸಾಕಷ್ಟು ಪರಿಣಾಮ ಉಂಟುಮಾಡಿದೆ. ಈಗಾಗಲೇ ಉತ್ತರ ಇಂಡಿಯಾದಲ್ಲಿ ಒಂದೊಂದು ರಾಜ್ಯಕ್ಕೂ ಇದ್ದ ವಲಯವನ್ನು ರದ್ದು ಮಾಡಿ ಕೆಲವು ಅಂದರೆ 3—4 ರಾಜ್ಯಗಳನ್ನು ಸೇರಿಸಿ ಒಂದು ವಲಯ ಎಂದು ಮಾಡಿದ್ದಾರೆ. ಅದೇ ರೀತಿ ಇನ್ನು ಸ್ವಲ್ಪ ದಿನಗಳಲ್ಲಿ ದಕ್ಷಿಣ ಭಾಗದಲ್ಲೂ ಸಹ ಮಾಡಬಹುದೆಂದು ನನಗೆ ಕಾಣುತ್ತದೆ. ಈ ಬಗ್ಗೆ ಎಲ್ಲಾ ಪ್ರಯತ್ನವನ್ನೂ ಸಹ ಮಾಡಲಾಗಿದೆ. ಈ ಬಗ್ಗೆ ಮಾನ್ಯ ಸದಸ್ಯರುಗಳು ಸಂಶಯ ಪಡಬೇಕಾಗಿಲ್ಲ. ಈಗ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಕಳ್ಳಸಾಗಾಣಿಕೆಯಿಂದ ತೆಗೆದುಕೊಂಡು ಹೋಗುವವರು ಬಹಳ ಜನ ಇದ್ದಾರೆ. ಇಂತಹವರ ಮೇಲೆ ಸಾಕಷ್ಟು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇಂತಹವರು ಬಹಳ ಜನ ಇದ್ದಾರೆಂದು ನಾನು ಒಪ್ಪುವುದಿಲ್ಲ. ಎಲ್ಲಿ ಇದ್ದಾರೆಂದು ಗೊತ್ತಾಗಿದೆಯೋ ಅಂತಹ ಕಡೆಯಲ್ಲಿ ಹಿಡಿದಿದ್ದೇವೆ, ಇದೇ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಿ. ಎನ್. ಪಾಟೀಲ್ ಅವರು ಬಹಳವಾಗಿ ಹೇಳಿದರು. ಬಿದರ್ ಜಿಲ್ಲೆಯ ಒಂದೆರಡು ಕಡೆ ಏನಾದರು ನಡೆದಿದ್ದರೆ ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ನಡೆಯುತ್ತಿದೆಯೆಂದು ಹೇಳುವುದು ಸರಿಯಲ್ಲ. ಅದನ್ನು ನಾನು ಒಪ್ಪುವುದಿಲ್ಲ. ಬ್ಲಾಕ್ ಮಾರ್ಕೆಟ್ ನಡೆಯುತ್ತಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಮೊದಲಗಿಂತ ಕಡಿಮೆಯಾಗಿದೆಯೆಂದು ಹೇಳುತ್ತೇನೆ. ಎಲ್ಲಾ ಕಡೆಯಲ್ಲಿಯೂ ಚೆಕ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಸೆಂಬ್ಲಿಯ ಸದಸ್ಯರುಗಳು ಏನಾದರು ಹೇಳಿದರೆ ಸರ್ಕಾರದವರು ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಅಜೀಜ್ ಶೇಠ್.—ನಾವುಗಳು ಜವಾಬ್ದಾರಿಯಿಂದಲೇ ಇಲ್ಲಿ ಮಾತನಾಡುವುದು. ನಾವು ಕೇವಲ 25 ರೂಪಾಯಿಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಇಲ್ಲಿಗೆ ಬಂದಿಲ್ಲ. ನಾವು ಎಂ. ಎಲ್. ಎ. ಆಗಿ ಜವಾಬ್ದಾರಿಯಿಂದ ನಡೆಯುತ್ತಿರುವ ಅನ್ಯಾಯಗಳನ್ನು ಹೇಳುತ್ತೇವೆ. ಅದೇ ರೀತಿ ಮಂತ್ರಿಗಳಾಗಿರುವ ನೀವು ತನಿಖೆ ಮಾಡಿಸಬೇಕು.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಎಂ. ಎಲ್. ಎ. ಆಗಿದ್ದಾರೆಂಬುದನ್ನು, ನಾನು ಮಂತ್ರಿಯಾಗಿದ್ದೇನೆ ಎಂಬುದನ್ನು ಒಪ್ಪುತ್ತೇನೆ. ಈ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಡುವುದು ಸಾಧ್ಯವಿಲ್ಲ. ಅವರು ಯಾವಾಗಲೂ ಸಹ ಮಾತನಾಡುತ್ತಿರುತ್ತಾರೆ. ನಿಶ್ಚಿತವಾಗಿ ಎಲ್ಲಿ ತಪ್ಪು ನಡೆದಿದೆಯೆಂದು ತಿಳಿಸಿದಾಗ ಮಾತ್ರ ಕ್ರಮ ತೆಗೆದುಕೊಳ್ಳಬಹುದೆಂದು ಒಪ್ಪುತ್ತೇನೆ.

ಇನ್ನು ಆಹಾರವನ್ನು ಸರ್ಕಾರದವರು ಸಂಗ್ರಹ ಮಾಡುತ್ತಿರುವ ಬಗ್ಗೆ ಮತ್ತು ಅದನ್ನು ವಿತರಣೆ ಮಾಡುತ್ತಿರುವ ಬಗ್ಗೆ ಮಾನ್ಯ ಸದಸ್ಯರುಗಳು ಅನೇಕರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಈಗಿರತಕ್ಕಂಥ ಲೆವಿ ಪದ್ಧತಿ ಇರಬೇಕೇ ಅಥವಾ ಬೇಡವೇ ಎಂಬುದು ಒಂದು ಪ್ರಶ್ನೆ ಇದೆ. ಲೆವಿ ಬಗ್ಗೆ ಯೋಚನೆ ಮಾಡಬೇಕು ಮತ್ತು ಸರಕಾರದ ನೀತಿಯಲ್ಲಿ ಬದಲಾವಣೆ ಮಾಡಬೇಕೆಂದೂ ಹೇಳಿದರು. ಸದ್ಯಕ್ಕೆ ಲೆವಿ ಮೂಲಕ ಮಾಡುವುದು ಸರಿ ಇದೆ ಮತ್ತು ಯಾವ ರೀತಿಯಾಗಿ ಎಲ್ಲಿ ಇದರಂತೆ ವಸೂಲು ಮಾಡಬೇಕೆಂದು ಸಲಹೆಗಳನ್ನು ಕೇಳಿದಾಗ ಕೆಲವರು ರೈಸ್ ಮಿಲ್‌ಗಳಲ್ಲಿ ಲೆವಿಯನ್ನು ಅಕ್ಕಿಯ ರೂಪದಲ್ಲಿ ವಸೂಲು ಮಾಡಬೇಕು ಎಂದು ಹೇಳಿದರು. ಮತ್ತು ಇದನ್ನು ನಿಲ್ಲಿಸಬೇಕು ಎಂದೂ ಹೇಳಿದರು. ಆದರೆ ಈಗ ಎಲ್ಲಾ ರೈತರೂ ಸಂತೋಷದಿಂದ ಅವರು ಕೊಡುವ ಧಾನ್ಯವನ್ನು ಲೆವಿ ರೂಪದಲ್ಲಿ ಕೊಡುತ್ತಿದ್ದಾರೆ. ಇದು ಯೋಗ್ಯ ಇದೆ ಎಂದು ಮಾಡಲಾಗಿದೆ. ಇದನ್ನು ಬದಲಾವಣೆ ಮಾಡಬೇಕು ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಯಾವ ರೀತಿ ಬದಲಾವಣೆ ಮಾಡಬೇಕು ಎನ್ನುವುದರ ಬಗ್ಗೆ ಸರಿಯಾದ ಸಲಹೆಗಳನ್ನು ಕೊಟ್ಟರೆ ಅದನ್ನು ವಿಚಾರ ಮಾಡಬಹುದು. ಆದರೆ ಇದರಲ್ಲಿ ಕೆಲವು ಕಡೆ ಲೆವಿಯಿಂತೆ ಹೆಚ್ಚು ಬಂದಿರಬಹುದು ಕೆಲವು ಕಡೆ ಕಡಿಮೆ ಬಂದಿರಬಹುದು. ಈ ರೀತಿ ಅಲ್ಲಲ್ಲಿ ಸ್ವಲ್ಪ ಹೆಚ್ಚೂ ಕಡಿಮೆಯಾಗಿರಬಹುದು. ಇದರ ಬಗ್ಗೆ ಸ್ಪಷ್ಟವಾಗಿ ವಿಚಾರ ಮಾಡಲಿಕ್ಕೆ ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟರೂ ಅದನ್ನು ವಿಚಾರ ಮಾಡಬಹುದು. ಇಷ್ಟು ಹೇಳಿ ನನ್ನ ಡಿಮ್ಯಾಂಡುಗಳಿಗೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

10-30 A.M.

ಶ್ರೀ ಅಜೀಜ್ ಸೇಟ್.—ಮಾನ್ಯ ಮಂತ್ರಿಗಳಾದ ಜತ್ತಿಯವರು ಇಲ್ಲಿ ಒಂದು ವಿಚಾರ ಸ್ಪಷ್ಟವಾಗಿ ಹೇಳಬೇಕು. ಲೆವಿ ಎಂದು ವಸೂಲು ಮಾಡುವುದು ಕಾನ್‌ಸ್ಟಿಟ್ಯೂಷನಲ್ ಆಗಿದೆಯೇ ಇಲ್ಲವೇ, ಅನ್‌ಕಾನ್‌ಸ್ಟಿಟ್ಯೂಷನಲ್ ಆಗಿದೆಯೇ ಎನ್ನುವುದು? ಇನ್ನೊಂದು ವಿಚಾರ ಅವರಲ್ಲಿ ಹೇಳಬೇಕಾಗಿದೆ. ಪಾರ್ಲಿಮೆಂಟಿನಲ್ಲಿ ಕೂಡ ಇಂತಹ ಲೆವಿ ರೀತಿ ತೆಗೆದುಕೊಳ್ಳಬಾರದು ಇದು ಅನ್‌ಕಾನ್‌ಸ್ಟಿಟ್ಯೂಷನಲ್ಲಾಗಿದೆ ಎಂದು. ಇಲ್ಲಿ ಲೆವಿ ರೂಪದಲ್ಲಿ ರೈತರಿಂದ ಕ್ವಿಂಟಾಲ್ ಭತ್ತಕ್ಕೆ 45 ರೂಪಾಯಿನಂತೆ ಕೊಂಡು ಬಳಿಕೆ ಮಾಡುವವರಿಗೆ 99 ರೂಪಾಯಿನಂತೆ ಮಾರುತ್ತಿದ್ದೀರಿ. ಇದೇ ರೀತಿ ಈಗ ಹೆಚ್ಚು ಬರುವ 50 ರೂಪಾಯಿಗಳನ್ನು ರೈತರಿಗೇ ಕೊಟ್ಟು ಇದನು ಸಬ್‌ಸಿಡೈಸ್ ಮಾಡುವಂತೆ ಏಕೆ ಮಾಡಬಾರದು? ಎಂದರೆ ರೈತರಿಗೆ ಬೇಕಾಗುವ ಎತ್ತು ಬೀಜ ಗೊಬ್ಬರಗಳನ್ನು ಕೊಟ್ಟು ಹೆಚ್ಚು ಬೆಳೆ ಬೆಳೆಯುವಂತೆ ಮಾಡಬಹುದು. ಈಗ ಲೆವಿ ಎಂದು ವಸೂಲು ಮಾಡುತ್ತಾ ರೈತರಿಂದ ಕ್ವಿಂಟಾಲಿಗೆ 45 ರೂಪಾಯಿನಂತೆ ಕೊಂಡುಕೊಂಡು ಮಾರಾಟ ಮಾಡುವಾಗ ಕ್ವಿಂಟಾಲಿಗೆ 99 ರೂಪಾಯಿನಂತೆ ಮಾರುವುದು ಯಾವ ನ್ಯಾಯ? ಮೈಸೂರು ಸಿಟಿಯಲ್ಲಿ ಒಂದು ಕಾರ್ಡಿಗೆ ಎರಡು ಹಾಗೂ ಮೂರು ಕೆ.ಜಿ. ಅಕ್ಕಿ ಎಂದು ಕೊಟ್ಟರೆ ಅದು ಸರಿಯೇ? ಒಂದು ಸಂಸಾರಕ್ಕೆ ಎರಡು ಕೆ.ಜಿ. ಅಕ್ಕಿ ಸಾಕಾಗುತ್ತದೆಯೋ ಎನ್ನುವುದನ್ನು ಮಾನ್ಯ ಮಂತ್ರಿಗಳಾದ ಜತ್ತಿಯವರು ತಿಳಿಸುತ್ತಾರೆಯೇ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಅಜೀಜ್ ಶೇಟ್‌ರವರು ಹೇಳಿದ್ದು ಲೆವಿ ಸಿಸ್ಟಂ ಕಾನ್‌ಸ್ಟಿಟ್ಯೂಷನಲ್ ಆಗಿದೆಯೋ ಇಲ್ಲವೇ ಅನ್‌ಕಾನ್‌ಸ್ಟಿಟ್ಯೂಷನಲ್ ಆಗಿದೆಯೋ ಎಂದು. ಅನ್‌ಕಾನ್‌ಸ್ಟಿಟ್ಯೂಷನಲ್ ಎಂದು ಕೋರ್ಟಿನವರು ನಿರ್ಣಯ ಮಾಡಿದರೆ ಅದನ್ನು ನಾವು ಆಗ ಕೈಬಿಡುತ್ತೇವೆ.

Sri DIGAMBAR RAO B. KALMANKAR.—The Hyderabad Karnatak area is not a paddy growing area. In spite of this forcible collection of levy of paddy is being made. Will the Government reconsider this and give up collection of paddy?

Sri B. D. JATTI.—Unless the farmers grow paddy, the question of collection of levy does not arise.

Sri H. SIDDAVEERAPPA.—It is within our experience during the last twenty years that more the controls the greater is the scarcity in this country. We experimented a number of times. Now the climate is favourable for complete decontrol and it is a matter within the purview of the State also. Why can't you embolden yourself and try to get rid of the whole thing which is a hot-bed for all sorts of corruption and evil practices? Instead of spending this money on your Food Department, you give it by way of subsidy to the growers so that they may grow food and give it to us. Could you kindly consider it?

Sri B. D. JATTI.—It is a valuable suggestion and it will be considered and considered favourably.

ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲ).—ಅಂಕೋಲ ತಾಲ್ಲೂಕಿನಲ್ಲಿ ರೈತರು ಡಿಕ್ಲರೇಷನ್ ಕೊಟ್ಟು ಅವರಲ್ಲಿ ಧಾನ್ಯವಿಲ್ಲ ಎಂದು ಹೇಳಿದರೂ ಕೂಡ ಅಧಿಕಾರಿಗಳು ಒತ್ತಾಯದಿಂದ ಲೆವಿ ವಸೂಲು ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದರೂ ವಸೂಲು ಮಾಡುತ್ತಿದ್ದಾರೆ. ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ?

Sri B. D. JATTI.—When actually search is being made if no stock is found out, it is all right. But during search if it is found out that he has got stocks and not declared them, he will be prosecuted.

ಶ್ರೀ ಡಿ. ಎಸ್. ನಾಡಕರ್ಣಿ.—ಪ್ರಾಸಿಕ್ಯೂಷನ್ ಮಾಡುವುದು ಸರಿಯಲ್ಲ ಎಂದರೂ ಮಾಡುತ್ತಿದ್ದಾರೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಸದಸ್ಯರು ಹೇಳಿದ್ದು ಅರ್ಥವಾಗಲಿಲ್ಲ ಎಂದು ತೋರುತ್ತೆ. ಆಯಾ ಶಾನುಭೋಗರುಗಳು ಅವರು ಬರೆಯುವ ಪಹಣಿ ಲೆಕ್ಕದಲ್ಲಿ ಅರಾಣಿ ಬೆಳೆಯೂ ಬಂದಿಲ್ಲ ಎಂದು ಇದ್ದರೂ ತಾವು ಈಗ ಮಾಡಿರುವ ಸುಗ್ರೀವಾಜ್ಞೆಯಂತೆ ಅಲ್ಲಿರುವ ತಹಶೀಲ್ದಾರರುಗಳು ಲೆವಿ ಕೊಡಬೇಕು ಎಂದು ಕಡ್ಡಾಯದಿಂದ ವಸೂಲು ಮಾಡುತ್ತಿದ್ದಾರೆ. ಇದರಿಂದ ಬೆಳೆ ಬೆಳೆಯದ ರೈತರಿಗೂ ಬಹಳ ತೊಂದರೆಗಳಾಗುತ್ತಿವೆ. ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಬಿ. ಡಿ. ಜತ್ತಿ.—ಇದಕ್ಕೆ ರೈತರು ಅಲ್ಲಿ ಒಂದು ಡಿಟರ್‌ಮಿನೇಷನ್ ಫಾರಂ ಎಂದು ಒಂದು ಇದೆ. ಇದನ್ನು ಪೂರ್ತಿಯಾಗಿ ಬರೆದು ಕೊಟ್ಟರೆ ಅಂತಹ ರೈತರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಒಂದು ವೇಳೆ ಇಲ್ಲಿ ಮಾನ್ಯ ಸದಸ್ಯರು ಹೇಳುವಂತೆ ಲೆವಿ ವಸೂಲಿ ಮಾಡಿದ್ದರೆ ಅದು ತಪ್ಪಾಗಿದ್ದರೆ ಅದನ್ನು ಸರಿಪಡಿಸಬಹುದು ಎಂದು ಇಲ್ಲಿ ಮಾನ್ಯ ಸದಸ್ಯರಿಗೆ ಅಷ್ಯೂರೆನ್ಸ್ ಕೊಟ್ಟಿದ್ದೇನೆ. ಇದಕ್ಕಿಂತ ಇನ್ನೇನು ಭರವಸೆಯನ್ನು ನಾನು ಕೊಡಬಹುದು?

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಮ್ಮ ತಾಲ್ಲೂಕಿನಲ್ಲಿ ಒಂದು ಕೇಸಿನ ಬಗ್ಗೆ ಪ್ರಾಸಿಕ್ಯೂಷನ್ ಆಗಿದೆ ಎಂದು ಸರಕಾರಕ್ಕೆ ಮಾಹಿತಿಗಳನ್ನು ಕೊಟ್ಟಿದ್ದೆ ಮತ್ತು ಈ ಕೇಸಿನಲ್ಲಿ ಕೋರ್ಟಿನವರು ದಂಡ ಕೂಡ ವಿಧಿಸಿದರು ಮತ್ತು ರೈತರಿಂದ ವಸೂಲಿ ಮಾಡಿದ ಭತ್ತವನ್ನು ಅವರಿಗೇ ವಾಪಸು ಕೊಡಬೇಕೆಂದೂ ಆಜ್ಞೆಯಾಯಿತು. ಇದರ ಬಗ್ಗೆ ಮಾನ್ಯ ಮಂತ್ರಿಗಳಾದ ಜತ್ತಿಯವರಿಗೂ ವಿನಂತಿ ಮಾಡಿದ್ದೆ. ಇದರ ಬಗ್ಗೆ ಕೂಡಲೇ ಸರಕಾರ ತೀವ್ರವಾದ ಕಾರ್ಯಕ್ರಮವನ್ನು ಈಗಲಾದರೂ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಇದರ ಬಗ್ಗೆ ನನಗೂ ತಿಳಿಸಿದರು. ಇದರ ಪ್ರಕಾರ ನಾನು ಅಲ್ಲಿರುವ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೆ ಮತ್ತು ಆ ವೇಳೆಗೆ ಈ ಕೇಸು ಕೋರ್ಟಿನಲ್ಲಿ ಇತ್ತು. ಮತ್ತು ಅಲ್ಲಿ ತೀರ್ಮಾನವೂ ಆಗಿದೆ ಎಂದು ತಿಳಿದು ಬಂತು. ಅದರಂತೆ ಅಲ್ಲಿ ತೆಗೆದುಕೊಂಡಿರುವ ಭತ್ತವನ್ನು ಆ ರೈತರಿಗೆ ವಾಪಸು ಕೊಡುವುದಕ್ಕೆ ಒಪ್ಪಿಗೆಯಾಗಿದೆ. ಅದನ್ನು ಕೊಡುತ್ತಾರೆ.

ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಯಾವ ಯಾವ ಜಿಲ್ಲೆಯಲ್ಲಿ ಲೆವಿ ರೂಪದಲ್ಲಿ ಕಾಳುಗಳನ್ನು ವಸೂಲು ಮಾಡುತ್ತಿದ್ದಾರೋ ಆ ಜಿಲ್ಲೆಗಳಲ್ಲೇ ಆ ಧಾನ್ಯಗಳನ್ನು ಹಂಚುತ್ತಿಲ್ಲ. ಇದರ ಉದ್ದೇಶವೇನು ಎನ್ನುವುದು ತಿಳಿಯುತ್ತಿಲ್ಲ. ಮತ್ತು ಲೆವಿ ವಸೂಲು ಮಾಡುವ ದರಕ್ಕೂ ಮಾರ್ಕೆಟ್ಟಿನಲ್ಲಿರುವ ದರಕ್ಕೂ ಬಹಳ ವ್ಯತ್ಯಾಸವಿದೆ. ಇದಕ್ಕೆ ಕಾರಣವೇನು? ಇಷ್ಟು ಹೆಚ್ಚು ದರ ವ್ಯತ್ಯಾಸ ಮಾಡಲು ಅವಶ್ಯಕತೆ ಇದೆಯೇ? ಲೆವಿ ಎಂದು ವಸೂಲು ಮಾಡುವುದರ ಉದ್ದೇಶವಾದರೂ ಏನು ಎನ್ನುವುದು ಸರಿಯಾಗಿ ಜನಗಳಿಗೆ ಗೊತ್ತಾಗುತ್ತಿಲ್ಲ. ಈ ಉದ್ದೇಶ ಸಾಧನೆಯಾಗಬೇಕಾದರೆ ಯೋಗ್ಯವಾದ ದರದಲ್ಲಿ ಕಾಳುಗಳು ಸಿಗುವಂತೆ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಸರಕಾರದ ನೀತಿಯನ್ನು ಸ್ಪಷ್ಟವಾಗಿ ಜನಕ್ಕೆ ತಿಳಿಯುವಂತೆ ಎಲ್ಲ ಪೇಪರುಗಳಲ್ಲಿಯೂ ಹಾಕಿ ಪ್ರಚಾರ ಮಾಡಬೇಕು, ಇದರ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಬಿ. ಡಿ. ಜತ್ತಿ.—ಲೆವಿ ರೂಪದಲ್ಲಿ ದವಸವನ್ನು ಯಾವ ಜುರಿಸ್‌ಡಿಕ್ಷನ್‌ನಲ್ಲಿ ವಸೂಲು ಮಾಡುತ್ತೇವೋ ಅದೇ ಕ್ಷೇತ್ರದಲ್ಲಿ ಕೊಡಬೇಕು ಎಂದು ಮಾಡುವುದು ಸಾಧ್ಯವಿಲ್ಲ. ಯಾವ ತಾಲ್ಲೂಕಿನಲ್ಲಿ ಅಥವಾ ಜಿಲ್ಲೆಯಲ್ಲಿ ಎಷ್ಟು ಲೆವಿ ರೂಪದಲ್ಲಿ ವಸೂಲು ಮಾಡಲಾಗಿದೆ ಅದನ್ನು ಪ್ರತಿಯೊಬ್ಬರಿಗೂ ಹಂಚಬೇಕು ಎಂದರೆ ಕಷ್ಟವಾಗುತ್ತದೆ. ಆದರೆ ಎಲ್ಲಿ ದವಸಗಳ ಕೊರತೆ ಇದೆಯೋ ಅದನ್ನು ನೋಡಿಕೊಂಡು ಅಲ್ಲಿ ಹಂಚಲು ಪ್ರಯತ್ನ ಮಾಡುತ್ತೇವೆ. ಆದರೆ ಎಲ್ಲರಿಗೂ ಹಂಚುತ್ತೇವೆ ಎಂದು ಹೇಳಿಲ್ಲ. ಅಲ್ಲಿರುವ ಆಫೀಸರು ಇದನ್ನೆಲ್ಲಾ ನೋಡಿಕೊಂಡು ಮಾಡುತ್ತಾರೆ ಎಂದು ನನಗೆ ಕಾಣುತ್ತದೆ.

ಶ್ರೀ ಸಿ. ಎಸ್. ದೇಸಾಯಿ (ಸಿಂದಗಿ).—ಲೆವಿ ವಸೂಲು ಮಾಡುವಾಗ ನೀರಾವರಿ ಪ್ರದೇಶಗಳಲ್ಲಿ ಇರುವ ಜಮೀನುಗಳನ್ನು ವಿಚಾರ ಮಾಡುವಾಗ ಪಿ.ಡಬ್ಲ್ಯು.ಡಿ.ಯವರು ಮಾಡಿರುವ ಆಧಾರದ ತರ ವಸೂಲು ಮಾಡುತ್ತೇವೆ ಎಂದು ಹೇಳಿದಿರಿ. ಎಂದರೆ ಐದು ಎಕರೆಗಳಷ್ಟು ಇರುವ ಪ್ರದೇಶಗಳಲ್ಲಿ ಎರಡು ಕ್ವಿಂಟಾಲ್‌ನಷ್ಟು, 5-10 ಎಕರೆಗಳವರೆಗೆ ಇದ್ದರೆ ನಾಲ್ಕು ಕ್ವಿಂಟಾಲುಗಳು ಮತ್ತು ಇದಕ್ಕೆ ಮೇಲ್ಪಟ್ಟು ಏರಿಯಾ ಹೆಚ್ಚಾಗಿದ್ದರೆ ಆರು ಕ್ವಿಂಟಾಲುಗಳಷ್ಟು ವಸೂಲು ಮಾಡಬೇಕೆಂದು ಇದೆ. ಆದರೆ ಇಲ್ಲಿ ಆ ರೀತಿ ಮಾಡದೆ 8-10 ಕ್ವಿಂಟಾಲುಗಳಷ್ಟು ವಸೂಲು ಮಾಡುತ್ತಿದ್ದಾರೆ. ಮತ್ತು ಇದರ ಮೇಲೆ ಲೆಕ್ಕಾಚಾರ ಮಾಡುವಾಗ ನೀವೇ ಹೇಳುವಂತೆ ಸೇಕಡಾ 20ಕ್ಕಿಂತ ಹೆಚ್ಚು ನೀರಾವರಿ ಪ್ರದೇಶ ಇಲ್ಲ ಎಂದರೂ ಶೇಕಡಾ 75 ರಷ್ಟು ಹೆಚ್ಚು ನೀರಾವರಿ ಪ್ರದೇಶ ಇದೆ ಎಂದು ಹೀಗೆ ಲೆಕ್ಕಾಚಾರ ಮಾಡುವುದು ಸರಿಯೇ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಈ ಸಮಸ್ಯೆ ಬಗ್ಗೆ ನನ್ನ ಕಡೆಗೆ ಬಂದು ತಿಳಿಸಿದ್ದಾರೆ. ಅವರು ಹೇಳುವುದು ಪಿ. ಡಬ್ಲ್ಯು. ಡಿ.ಯವರು ಏನು ಪ್ರಾಜೆಕ್ಟ್‌ಗಳಿವೆ, ಅವರು ಹೇಳುವಂತೆ ಪೆರಿನಿಯಲ್ ಸೋರ್ಸಸ್ ಹೇಗೆ ಇದೆ ಎನ್ನುವುದರ ಬಗ್ಗೆ ವಿವರಗಳನ್ನು ತಿಳಿಸಿದಂತೆ ನಾವೂ ಲೆವಿ ವಸೂಲು ಮಾಡುತ್ತಿದ್ದೇವೆ. ಇದು ಸರಿಯಲ್ಲ ಇದನ್ನು ಪುನಃ ಪಿ.ಡಬ್ಲ್ಯು.ಡಿ.ಯವರಿಗೆ ಕಳುಹಿಸ ಬೇಕು ಎಂದು ಹೇಳುತ್ತಾರೆ ಮತ್ತು ಇದರಲ್ಲಿ ಬಹಳ ಹೆಚ್ಚು ಕಡಿಮೆಯಾಗುತ್ತದೆ ಎಂದೂ ಹೇಳು ತ್ತಾರೆ. ಇದರಲ್ಲಿ ಕೆಲವು ಕಡೆ ಹೆಚ್ಚು ಕಡಿಮೆಯಾಗಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಹಿಂದಿನ ವರ್ಷ ಅಸೆಂಬ್ಲಿ ಅಧಿವೇಶನ ಸೇರಿದಾಗ ಈ ಸದನದಲ್ಲಿ ಆಹಾರ ಧಾನ್ಯ ಎತ್ತುವಳಿ ವಿಷಯದಲ್ಲಿ ಒಂದು ಹೇಳಿಕೆ ಕೊಟ್ಟಿರುವರು. ಲೆವಿ ವಸೂಲ್ಮಾಡುವ ಬಗ್ಗೆ ಸರಕಾರದ ನೀತಿ ಈ ರೀತಿ ಇದೆ ಎಂದು ತಿಳಿಸಿದ್ದಾರೆ. ಆಯಾಯ ಗ್ರೂಪ್ ಪಂಚಾಯತಿ ಸದಸ್ಯರು ಆ ಹೋಬಳಿಯಲ್ಲಿ ಇರತಕ್ಕಂಥ ರೆವೆನ್ಯೂ ಇನ್ಸ್‌ಪೆಕ್ಟರ್ ಅವರು ಸೇರಿ ಒಂದು ಗ್ರಾಮದಲ್ಲಿ ಯಾವ ಯಾವ ವ್ಯಕ್ತಿಯಿಂದ ಎಷ್ಟು ಲೆವಿ ಕೊಡಲು ಸಾಧ್ಯವಿದೆ ಎನ್ನುವುದನ್ನು ನೋಡಿ ಅದರ ಬಗ್ಗೆ ಒಂದು ಲಿಸ್ಟ್ ತಯಾರ್ಮಾಡಬೇಕು ಮತ್ತು ಆ ರೀತಿ ಲೆವಿ ವಸೂಲ್ಮಾಡಬೇಕು, ಇಷ್ಟು ಮಾಡಿದರೆ ಸಾಕು, ಇದು ಎಲ್ಲರಿಗೂ ಕಡ್ಡಾಯವಾಗಿ ಇಲ್ಲ ಎಂದು ಈ ಸದನದಲ್ಲಿ ಒಂದು ಹೇಳಿಕೆ ಕೊಟ್ಟಿದ್ದರು. ಈ ಮಾನೆಯಲ್ಲಿ ಹೇಳಿಕೆ ಕೊಟ್ಟ ಪ್ರಕಾರ ಮೈಸೂರು ರಾಜ್ಯದಲ್ಲಿ ಇದು ನಡೆಯುತ್ತಿದೆಯೇ ಎಂದು ಅದು ಯಾವ ಕಡೆ ಕೂಡ ಇಲ್ಲ. ಯಾವ ಅಧಿಕಾರಿಗೂ ಇನ್ನೂ ಕೂಡ ಗವರ್ನ್‌ಮೆಂಟ್ ಆರ್ಡರ್ ಹೋಗಿಲ್ಲ. ಶಿವಮೊಗ್ಗ ಡೆಪ್ಯೂಟಿ ಕಮಿಷನರ್ ಹಾಗು ತಹಶೀಲದಾರರನ್ನು ಕೇಳಿದ್ದೇವೆ. ಯಾರಿಗೂ ಈ ಆರ್ಡರ್ ಬಂದಿಲ್ಲ ಎಂದು ಅವರು ಹೇಳುತ್ತಾರೆ. ಇದರ ಅರ್ಥ ಏನು ?

Mr. CHAIRMAN.—Let the hon. Member please take his seat. I don't allow.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಅದಕ್ಕೋಸ್ಕರ ನಾನು ಕೇಳುತ್ತೇನೆ, ಅಧಿಕಾರಿಗಳು ವಸೂಲ್ಮಾಡುವುದಕ್ಕೆ ಲೆವಿ ಕಾನೂನು ಇದೆಯೇ ? ಕಾನೂನು ಪ್ರಕಾರ ಅವರು ವಸೂಲ್ಮಾಡುವು ದಿಲ್ಲ. ತಮ್ಮ ಹೇಳಿಕೆಯ ಪ್ರಕಾರ ವಸೂಲ್ಮಾಡುವುದಿಲ್ಲ. ಹಾಗಾದರೆ ಸರಕಾರದ ನೀತಿ ಏನು ? ಇದಕ್ಕೆ ಕಾನೂನು ಹೊರಡಿಸಿ ಅದನ್ನು ಅಧಿಕಾರಿಗಳಿಗೆ ಕಳಿಸಿದ್ದರೆ ಅದು ಕ್ಷೇಮ. ಇದನ್ನು ಮಾಡದೇ ಇರುವುದರಿಂದ ಲೆವಿ ತೆಗೆದುಕೊಳ್ಳುವಾಗ ಪ್ರತಿಯೊಬ್ಬರ ಮೇಲೆ ವಿಪರೀತ ಕೇಸು ಹಾಕುತ್ತಿದ್ದಾರೆ. ಅದಕ್ಕೆ ಕಾರಣ ಕೊಡುತ್ತಿದ್ದಾರೆ. ಲೆವಿ ವಸೂಲ್ಮಾಡುವ ಮೂಲತತ್ವದ ಬಗ್ಗೆ ನಮ್ಮದು ವಿರೋಧವಿಲ್ಲ. ನಮ್ಮ ವಿರೋಧ ಇರುವುದು ಪ್ರಸ್ತುತ ಇರತಕ್ಕ ಪರಿಸ್ಥಿತಿ ಏನು ಇದೆ ಅದರ ಬಗ್ಗೆ ಇದೆ. ಸರಕಾರದ ಮುಂದೆ ಇದನ್ನು ಅನೇಕ ಸಲ ಹೇಳಿದ್ದೇವೆ. ಆದರೆ ನಾವು ಹೇಳುವುದಕ್ಕೆ ಸರಕಾರ ಕೊಟ್ಟಿರುವುದು ಡೆಫ್ ಇಯರ್ ಮಾತ್ರ.

Mr. CHAIRMAN.—Let him please resums him seat.

ಶ್ರೀ ಎಸ್. ಬಂಗಾರಪ್ಪ.—ಕೊನೆಯ ಒಂದು ಮಾತು ಹೇಳಿ ಮುಗಿಸಿ ಬಿಡುತ್ತೇನೆ.

Mr. CHAIRMAN.—Then he may put a clear question.

ಶ್ರೀ ಎಸ್. ಬಂಗಾರಪ್ಪ.—ಕೊನೆಯ ಮಾತು ಒಂದು ಹೇಳುತ್ತೇನೆ. ಶ್ರೀ ಭಾಸ್ಕರ ಶೆಟ್ಟಿಯವರು ಕಳ್ಳಸಾಗಾಣಿಕೆಯಿಂದ ಭತ್ತ ಅಕ್ಕಿ ಮಂಗಳೂರು ಜಿಲ್ಲೆಯಿಂದ ಹೋಗುತ್ತಿದೆ ಎಂದು ಮಾನ್ಯ ಮಂತ್ರಿಗಳಿಗೆ ತಿಳಿಸಿದರು. ನಾನು ಹೇಳುತ್ತೇನೆ ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಲೆವಿ ಎತ್ತಬೇಕು ಎನ್ನುವುದು ನಿಗದಿ ಮಾಡಿದರೆ ಅಷ್ಟು ಧಾನ್ಯ ಶೇಖರಣೆಯಾಗುತ್ತಿತ್ತು. ಅದಿಗೆ ಪ್ರತಿ ದಿನ 15—20 ಲೋಡೆಡ್ ಲಾರಿಗಳು ಹೊರಗಡೆಗೆ ಹೋಗುತ್ತಿವೆ. ಈ ರೀತಿ ಧಾನ್ಯ ಲಾರಿಗಳಲ್ಲಿ ತುಂಬಿಕೊಂಡು ಹೋಗುವುದಕ್ಕೆ ಪ್ರತಿದಿವಸ ಒಂದು ಲಾರಿಯಿಂದ 500 ರೂಪಾಯಿ ಲಂಚ ಅಧಿಕಾರಿಗಳು ತಿನ್ನುತ್ತಿದ್ದಾರೆ ಎಂದು ಇದು ಜನಜನಿತವಾಗಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ? ನೀವು ನನ್ನ ಜೊತೆಗೆ ಬರುತ್ತೀರಾ ? ನೀವು ನನ್ನ ಜೊತೆಗೆ ಬಂದರೆ ಇಂಥ ಲಾರಿಗಳನ್ನು ಹಿಡಿಸಿ ಕೊಡುತ್ತೇನೆ. ಇದನ್ನು ಹಿಡಿಯುವುದಕ್ಕೆ ಬೇರೆ ದಾರಿ ಮೂಲಕ ಹೋಗಬೇಕಾಗುತ್ತದೆ.

ಶ್ರೀ ಬಿ. ಡಿ. ಜತ್ತಿ.—ಮೊದಲನೇ ಮಾತು ಅವರು ಹೇಳಿದ್ದು ಸರಿಯಲ್ಲ. ಎಲ್ಲಿ ಸ್ಕೇರ್‌ಸಿಟಿ ಕಂಡೀಷನ್ಸ್ ಇದೆಯೋ, ಎಲ್ಲಿ ಸರಕಾರ ಆ ರೀತಿ ಡಿಕ್ಲೇರ್ ಮಾಡಿದೆಯೋ ಅಂಥಲ್ಲಿ ಗ್ರಾಮ ಪಂಚಾಯತಿಯ ತಾಲ್ಲೂಕ್ ಬೋರ್ಡಿನವರು, ಅಲ್ಲಿರುವ ಸದಸ್ಯರು ಒಂದು ಪಟ್ಟಿ ಮಾಡಿ ಇಷ್ಟು

ಲೆವಿ ಬರಬೇಕು, ಬೆಳೆ ಸರಿಯಾಗಿ ಬಂದಿಲ್ಲ, ಆದುದರಿಂದ ಇಷ್ಟೇ ವಸೂಲ್ಮಾಡಬೇಕು ಎಂದು ಹೇಳಿರುವುದನ್ನು ಇಡೀ ಮೈಸೂರು ರಾಜ್ಯಕ್ಕೆ ಅನ್ವಯಿಸುವುದು ತಪ್ಪು. ಇನ್ನೊಂದು ಮಾತು ಅವರು ಸರಿಯಾಗಿ ಹೇಳಲಿಲ್ಲ. ಡೆಪ್ಯುಟಿ ಕಮಿಷನರ್‌ರಿಗೆ ಸುರ್ಕ್ಯುಲರ್ ಕಳಿಸಿದ್ದೇವೆ. ಸರ್ಕ್ಯುಲರ್ ಕಳಿಸಿಲ್ಲ ಎಂದು ಅವರು ಹೇಳುವುದು ತಪ್ಪು, ಅದು ಸರಿಯಲ್ಲ. ಲಂಚ ತೆಗೆದು ಕೊಳ್ಳುತ್ತಾರೆ ಎನ್ನುವುದು ಅವರಿಗೆ ಗೊತ್ತಿದೆ ಎಂದು ಹೇಳುತ್ತಾರೆ. ಒಂದು ಪಟ್ಟಿ ಮಾಡಿ ಅದನ್ನು ವಿವರವಾಗಿ ನನಗೆ ಕೊಡಲಿ. ಅದನ್ನು ನನಗೆ ಕೊಟ್ಟರೆ ಅದನ್ನು ಪತ್ತೆ ಹಚ್ಚುವುದಕ್ಕೆ ಪೋಲೀಸ್ ಅಧಿಕಾರಿಗಳ ಕೂಡ ಅವರನ್ನೂ ನೇಮಿಸುತ್ತೇನೆ.

(ಗೊಂದಲ)

Mr. CHAIRMAN.—I won't allow any speech. The member must put a specific question.

Mr. AZEEZ SAIT.—Question forms part of the speech.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಅನೇಕ ರೈತರು ಮುಸುಕಿನ ಜೋಳ ಬೆಳೆದಿದ್ದಾರೆ. ಒಂದು ಮೂಟೆಗೆ 60 ರೂಪಾಯಿ ಬೆಲೆ ಗೊತ್ತು ಮಾಡಿರುವುದು ಅದು ಕಡಿಮೆಯಲ್ಲ, ಅದು ಸರಿಯಾಗಿ ಇದೆ ಎಂದು ಹೇಳಿದರು. ಈ ಬೆಲೆ ಹೇಗೆ ಗೊತ್ತು ಮಾಡಿದ್ದಾರೆ ತಿಳಿಸುತ್ತೀರಾ,

ಶ್ರೀ ಬಿ. ಡಿ. ಜತ್ತಿ.—ಕಳೆದ ಮೂರು ವರ್ಷಗಳಿಂದ ಹೆಚ್ಚಾಗಿ ಮುಸುಕಿನ ಜೋಳ ಬೆಳೆಯುತ್ತಿದ್ದಾರೆ. ಒಂದು ಎಕರೆಯಲ್ಲಿ ಎರಡು ಮೂಟೆ ಮೂರು ಮೂಟೆ ನಾಲ್ಕು ಮೂಟೆ ರಾಗಿ ಬೆಳೆಯುತ್ತಿದ್ದರು ಅಂಥ ಕಡೆ ಕನಿಷ್ಟ ಪಕ್ಷ 15 ಮೂಟೆ ಮುಸುಕಿನ ಜೋಳ ಬೆಳೆಯುತ್ತಿದ್ದಾರೆ. ಮುಸುಕಿನ ಜೋಳ ಹೆಚ್ಚು ಬೆಳೆಯುತ್ತಾರೆ. ಒಂದೊಂದು ಮೂಟೆಗೆ 60 ರೂಪಾಯಿ ಬೆಲೆಯಾದರೆ ಅವರಿಗೆ ಲಾಭವಾಗುತ್ತದೆ. ಇದನ್ನು ವಿಚಾರ ಮಾಡಬೇಕಾಗಿಲ್ಲ. ಸರ್ಕಾರದ ದೃಷ್ಟಿಯಿಂದಲೂ ಶ್ರೀ ರಾಮೇಗೌಡರ ದೃಷ್ಟಿಯಿಂದಲೂ ಈ ಬೆಲೆ ಗೊತ್ತುಮಾಡಿರುವ ಪದ್ಧತಿ ಸರಿಯಾಗಿದೆ.

ಶ್ರೀ ಎಂ. ನಾಗಪ್ಪ.—ಲೆವಿ ಪದ್ಧತಿ ತಪ್ಪು ಎಂದು ಹೈಕೋರ್ಟು ತೀರ್ಮಾನ ಮಾಡಿದರೆ ಅದು ನಿಮ್ಮ ಗಮನಕ್ಕೆ ಬಂದರೆ ಈ ಪದ್ಧತಿ ತೆಗೆದುಹಾಕುತ್ತೀರಾ? ಮದ್ರಾಸ್ ಮತ್ತು ಕೇರಳ ಹೈಕೋರ್ಟು ಇದು ತಪ್ಪು ಪದ್ಧತಿ ಎಂದು ಹೇಳಿದ್ದಾರೆ. ಅದರ ಬಗ್ಗೆ ನೀವು ಏನು ಯೋಚಿಸಿದ್ದೀರಿ! ರಾಯಚೂರು ತಾಲ್ಲೂಕಿನಲ್ಲಿ ರೈತರು ವಿವರ ಒದಗಿಸುವುದಕ್ಕೆ ಒಂದು ಫಾರ್ಮ್ ಕೊಟ್ಟಿದ್ದೇವೆ ಎಂದು ಹೇಳಿದರು. ರೈತರಿಗೆ ಫಾರ್ಮ್ ದೊರೆತಿಲ್ಲ. ಅವರು ಹೇಗೆ ವಿವರ ಕೊಡಬೇಕು? ಅವರು ಯಾವ ಕಾಗದದಲ್ಲಿ ಬರೆದು ಕೊಡಬೇಕು!

ಶ್ರೀ ಬಿ. ಡಿ. ಜತ್ತಿ.—ಮೊದಲನೆಯ ಪ್ರಶ್ನೆಗೆ ಉತ್ತರ ಅಂದರೆ ನಮ್ಮ ಹೈಕೋರ್ಟು ಲೆವಿ ಸಿಸ್ಟಂ ಕಾನೂನುಬಾಹಿರ ಎಂದು ಹೇಳಿಲ್ಲ. ಆದುದರಿಂದ ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಇನ್ನೊಬ್ಬರ ವಿಚಾರ ಮಾಡುವುದು ಅವಶ್ಯಕತೆ ಇಲ್ಲ. ಡಿಟರ್ಮಿನೇಷನ್ ಫಾರ್ಮ್ ಸರಕಾರದವರು ಹಂಚಬೇಕು ಎಂದು ನಿಯಮವಿಲ್ಲ. ಇದನ್ನು ಒತ್ತಾಯಮಾಡಿ ಕೊಡುವ ಅವಶ್ಯಕತೆ ಇಲ್ಲ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಲೆವಿ ತೆಗೆಯಿರಿ ಎಂದು ಕೆಲವರು ಹೇಳುತ್ತಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದರು. ಯಾರಿಗೆ ಕೊಡುವುದಕ್ಕೆ ಶಕ್ಯವಿದೆ ಅವರಿಂದ ತೆಗೆದುಕೊಳ್ಳಿ, ಜನಗಳಿಗೆ ಕಿರುಕುಳ ಕೊಡದೆ ಯಾರ ಕಡೆಯಿಂದ ವಸೂಲುಮಾಡಬಹುದೋ ಅವರಿಂದ ವಸೂಲುಮಾಡಿ.

ವಸೂಲುಮಾಡಿದ ಆಹಾರ ಧಾನ್ಯವನ್ನು ಸರಿಯಾಗಿ ಇಡದೆ ಇದ್ದುದರಿಂದ ಬದರೆಯಲ್ಲಿ 225 ಕ್ವಿಂಟಾಲ್ ಗೋಧಿಕಾಳು ಜನರು ತಿನ್ನುವುದಕ್ಕೆ ಅರ್ಹವಿಲ್ಲವೆಂದು ಗೊತ್ತಾಗಿ ಅದನ್ನು ಜಿಲ್ಲಾಧಿಕಾರಿಗಳು ಸೀಜ್ ಮಾಡಿದ್ದಾರೆ.

ಕಲ್ಯಾಣದಿಂದ ಹುಮ್ನಾಬಾದ, ಹುಮ್ನಾಬಾದದಿಂದ ಗುಲ್ಬರ್ಗ ಕಡೆಗೆ ಆಹಾರ ಧಾನ್ಯಗಳು ಕಳ್ಳತನದಲ್ಲಿ ಹೋಗುತ್ತಿದ್ದುದನ್ನು ಹಿಡಿಯಲು ಆಹಾರ ಇನ್‌ಸ್ಪೆಕ್ಟರವರು ಲಾರಿಗಳನ್ನು ಬೆನ್ನಟ್ಟಿ ಹೋಗಿ ಆ ಸಂಬಂಧದಲ್ಲಿ ಅವರು ಪ್ರಾಣ ತೆತ್ತದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ! ಇಂಥ ದೈವಿಲ್ಲ ಆಗುತ್ತಿರುವಾಗ ಆಹಾರದ ಕಳ್ಳ ಸಾಗಣೆ ನಡೆಯುತ್ತಿದೆ ಎಂದರೆ ಜನರಲೈಸ್ ಮಾಡುತ್ತಿದ್ದೀರಿ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದು ಹೇಗೆ?

ಒಂದೂವರೆ ರೂಪಾಯಿಗೆ ಒಂದು ಕೆ.ಜಿ. ಸಕ್ಕರೆ ಸಿಕ್ಕುತ್ತಿದ್ದುದು ಈಗ ನಾಲ್ಕು ರೂಪಾಯಿ ವರೆಗೂ ಏರಿಗಿದೆ. ಇದೆಲ್ಲ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುವವರ ಬೇಜವಾಬ್ದಾರಿಯಿಂದ ಆಗಿದೆ ಎಂದರೆ ಒಪ್ಪುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ನೂರಕ್ಕೆ 40 ಭಾಗವನ್ನು ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಬಿಡುಗಡೆ ಮಾಡಿದ್ದರೆ ಬ್ಲಾಕ್ ಮಾರ್ಕೆಟ್ ಪ್ರಸಂಗವೇ ಬರುವುದಿಲ್ಲ. ಬಹಿರಂಗ ಮಾರುಕಟ್ಟೆಯಲ್ಲಿ ಯಾರು ಬೇಕಾದರೂ ಮಾರಾಟ ಮಾಡುವುದಕ್ಕೆ ಅವಕಾಶವಿದೆ; ಯಾರು ಬೇಕಾದರೂ ಕೊಂಡುಕೊಳ್ಳುವುದಕ್ಕೆ ಅವಕಾಶವಿದೆ. ಆದ್ದರಿಂದ ಬ್ಲಾಕ್ ಮಾರ್ಕೆಟ್ ಸಮಸ್ಯೆಯೇ ಉದ್ಭವಿಸುವುದಿಲ್ಲ.

ಒಂದು ಲಾರಿ ಅಥವಾ ಎರಡು ಲಾರಿ ಕಳ್ಳತನದಲ್ಲಿ ಸಾಗಿಸಿದರು ಎಂದು ಬೆನ್ನು ಹತ್ತಿ ಹೋಗಿರಬಹುದು. ಅದನ್ನು ಇಲ್ಲ ಎಂದು ನಾನು ಹೇಳಲಿಲ್ಲ. ಚೆಕಿಂಗ್ ಎಷ್ಟು ಬೇಕೋ ಅಷ್ಟು ಮಾಡುತ್ತೇನೆ. ಒಂದೆರಡು ಉದಾಹರಣೆಗಳನ್ನು ತೆಗೆದುಕೊಂಡು ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯೂ ಆಗುತ್ತದೆ ಎನ್ನುವುದು ಸರಿಯಲ್ಲ ಎಂದು ಹೇಳಿದೆ.

ಲೆವಿ ವಸೂಲು ಮಾಡುವಾಗ ನಾವು ಯಾವುದೋ ಒಂದು ಸಂದರ್ಭವನ್ನು ತೆಗೆದುಕೊಂಡು ಅದನ್ನು ಜನರಲೈಸ್ ಮಾಡುವುದು ಪದ್ಧತಿಯಾಗಿದೆ. ಯಾರ ಹತ್ತಿರ ಇಲ್ಲ ಅವರ ಹತ್ತಿರ ತೆಗೆದುಕೊಳ್ಳುತ್ತಿಲ್ಲ. ಒಬ್ಬರಿಗೆ ಅನ್ಯಾಯ ಆಗುತ್ತಿದೆ ಎಂದು ಯಾರಾದರೂ ಮಾನ್ಯ ಸದಸ್ಯರು ಹೇಳಿದರೆ ಅದರ ಬಗ್ಗೆ ವಿಚಾರಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು).—ಸಕ್ಕರೆ ಹಂಚಿಕೆಯಲ್ಲಿ ನಗರಗಳಲ್ಲಿ 500 ಗ್ರಾಂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 50-75 ಗ್ರಾಂ ಕೊಡುತ್ತಾರೆ. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಮಾಡಿ ನಗರ ಪ್ರದೇಶಗಳಿಗೆ ಕೊಡುವಂತೆ ಕೊಟ್ಟರೆ ಗ್ರಾಮಾಂತರ ಪ್ರದೇಶದ ಜನಗಳಿಗೆ ಒಳ್ಳೆಯದಾಗುತ್ತದೆ ಎನ್ನುವುದರ ಬಗ್ಗೆ ಸರ್ಕಾರದ ಅಭಿಪ್ರಾಯವನ್ನು ಹೇಳಬಹುದೇ?

ಶ್ರೀ ಬಿ. ಡಿ. ಜತ್ತಿ.—ಮೊದಲು ಪಟ್ಟಣದ ಜನ ಹೆಚ್ಚು ಸಕ್ಕರೆಯನ್ನು ಉಪಯೋಗ ಮಾಡುತ್ತಾರೆನ್ನುವ ಲೆಕ್ಕ ಇಟ್ಟುಕೊಂಡು ಅವರಿಗೆ ಹೆಚ್ಚು ಕೊಡುತ್ತ ಬರಲಾಯಿತು. ಇತ್ತೀಚೆಗೆ ಗ್ರಾಮಾಂತರ ಪ್ರದೇಶಗಳಲ್ಲಿರುವವರು ಉಪಯೋಗ ಮಾಡುತ್ತಿರುವುದರಿಂದ ಅವರಿಗೂ ಹೆಚ್ಚು ಕೊಡಲು ಪ್ರಯತ್ನ ಮಾಡಿದ್ದೇವೆ. ಅವರಿಗೆ ಇನ್ನೂ ಹೆಚ್ಚು ಕೊಡುವ ಅವಕಾಶವಿದೆ ಎಂದು ಈ ಸಭೆಯಲ್ಲಿ ಎಲ್ಲರೂ ಒಪ್ಪುವುದಾದರೆ ಹೆಚ್ಚು ಮಾಡುವುದಕ್ಕೆ ಸಿದ್ಧನಾಗಿದ್ದೇನೆ.

Sri B. P. KADAM (Karwar).—Is the Government aware that last year for inadequate payment of levy of 100 kgs. all those who have been prosecuted in Karwar Taluk are invariably Marathi and Konkani speaking people, and may I know whether anybody in the Cabinet have passed orders, either in writing or orally to the officers, that only such people should be prosecuted ?

ಶ್ರೀ ಬಿ. ಡಿ. ಜತ್ತಿ.—ನಮ್ಮ ಕರ್ಣಾಟಕ ರಾಜ್ಯದೊಳಗೆ ಭಾಷೆಯ ಮೇಲೆ, ಜಾತಿಯ ಮೇಲೆ ವ್ಯತ್ಯಾಸ ಮಾಡಿಲ್ಲ. ಅದರಂತೆ ಮಾಡಿದರೆ ಶುದ್ಧ ಅನ್ಯಾಯ.

Sri B. P. KADAM.—Will the hon'ble Minister enquire into the matter ?

Sri B. D. JATTI.—If the hon'ble Member pass on the information to me, I will enquire into it.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಗ್ರಾಮಾಂತರಗಳಲ್ಲಿ ವಸೂಲು ಮಾಡಿರತಕ್ಕ ಲೆವಿ ಜೀವನಕ್ಕೇ ಸಾಕಾಗದೆ ಇರುವಂಥ ಸಣ್ಣ ಹಿಡುವಳಿದಾರರಿಂದ ಮಾತ್ರ ಮತ್ತು ದೊಡ್ಡ ಹಿಡುವಳಿದಾರರಿಗೆ ರಿಯಾಯಿತಿಯನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಬಿ. ಡಿ. ಜತ್ತಿ.—ಇಲ್ಲ.

Sri TIRUMALADEVA RAYA (Gangavati).—Is the hon'ble Minister aware that due to breach of Tungabhadra Left Bank Canal though thousands of applications were given to the Tahsildar, not a single application was entertained and levy was collected ? In another instance, when a villager was bringing his produce from Gangavati, 50 per cent of his produce was taken away ; is it justifiable ?

Sri B. D. JATTI.—If the facts stated by the hon'ble Member are correct, it is not justifiable.

Sri C. K. RAJAIAH SETTY.—Government is dealing with foodgrains on 'no loss-no profit' basis. After verifying the actual figures, may I know whether Government has gained or lost something?

Sri H. SIDDAVEERAPPA.—The correct position is that the loss is borne by the growers!

Sri B. D. JATTI.—Sir, it is true that the Food Department is run on 'no profit-no loss' basis. But, as per the figures for 1965-66 and 1966-67, we have made slight profits; it is roughly Rs. 28 to Rs. 30 lakhs per year. This year, it is likely that we may lose, because we have purchased gram and gram dhal at a higher rate. Since the respective States and the Government of India removed the ban on movement, we are getting more gram and the prices have come down. But, on the whole, the intention of the Government is to run the department on 'no loss-no profit basis'.

ಶ್ರೀಮತಿ ಲೀಲಾವತಿ ರೈ (ಬಂಟವಾಳ್).—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುವ ನೀರನ್ನು ಏತಗಳ ಮೂಲಕ ತೆಗೆದುಕೊಂಡು ವ್ಯವಸಾಯ ಮಾಡುತ್ತಿದ್ದರು. ಈಗ ಪಂಪ್‌ಸೆಟ್ ಹಾಕಿ ನೀರನ್ನು ಉಪಯೋಗ ಮಾಡುತ್ತಿದ್ದಾರೆ. ಸರ್ಕಾರಕ್ಕೆ ಅದರಿಂದ ಏನೂ ಖರ್ಚು ಇಲ್ಲ. ಆದರೂ ಅದಕ್ಕೆ ವಾಟರ್ ರೇಟ್, ಸೆಸ್ ಕೊಡಬೇಕು ಎಂದು ಹೇಳುತ್ತಿದ್ದಾರೆ. ಇದಕ್ಕೆ ಟ್ಯಾಕ್ಸ್ ಹಾಕ ಬಾರದು ಎಂದು ಮನವಿಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವರೇ?

ಶ್ರೀ ಬಿ. ಡಿ. ಜತ್ತಿ.—ಅದರ ಬಗ್ಗೆ ನನಗೆ ಗೊತ್ತಿಲ್ಲ. ಕೇಳಿಕೊಂಡು ಉತ್ತರ ಕೊಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಆಹಾರ ಇಲಾಖೆಯವರು ಆಮದು ಮಾಡಿಕೊಳ್ಳತಕ್ಕ ಕಡಲೆಬೇಳೆ, ತೊಗರಿ ಬೇಳೆ ಇವುಗಳನ್ನು ಹೆಚ್ಚು ಬೆಲೆಗೆ ಕೊಂಡು ಕಡಮೆ ಬೆಲೆಗೆ ಮಾರುವುದರಿಂದ, ಸಕ್ಕರೆಯನ್ನು 400 ರೂಪಾಯಿಗಳಿಗೆ ಕೊಂಡು 370-375 ರೂಪಾಯಿಗಳಿಗೆ ಮಾರಿದ್ದರಿಂದ ಏನು ನಷ್ಟ ಬಂತೋ ಅದನ್ನು ತುಂಬುವುದಕ್ಕೆ ಸಕ್ಕರೆಗೆ ಇದ್ದ ಕಂಟ್ರೋಲ್ ಧಾರಣೆಯನ್ನು ಇತ್ತೀಚೆಗೆ 10 ರೂಪಾಯಿ ಗಳಷ್ಟು ಜಾಸ್ತಿ ಮಾಡಿದ್ದೀರಾ ಅಥವಾ ಬೇರೆ ಯಾವ ಉದ್ದೇಶಕ್ಕೋಸ್ಕರ ಜಾಸ್ತಿ ಮಾಡಿದ್ದೀರಿ?

ಆಹಾರದ ಡೈರೆಕ್ಟರ್ ಆಫೀಸಿನ ವಿಚಾರದಲ್ಲಿ ಹೋದ ಬಜೆಟ್ ಅಧಿವೇಶನದಲ್ಲಿ ದೊಡ್ಡ ಆಪಾದನೆ ಬಂದು ಯಾವುದೋ ಒಂದು ಮಳಿಗೆಗೆ ಹೆಚ್ಚಿನ ಬಾಡಿಗೆ ಕೊಡುತ್ತಿದ್ದೀರಿ ಎಂದು ಅಪಾದನೆ ರಾಗಿತ್ತು. ಈಪಾಗ ಅದನ್ನು ಬೇರೆ ಕಡೆಗೆ ಹಾಕಿದ್ದಾರೆ. ಈಗ ಏನು ಬಾಡಿಗೆ ಕೊಡುತ್ತಿದ್ದೀರಿ, ಹಿಂದೆ ಏನು ಬಾಡಿಗೆಯನ್ನು ಕೊಡುತ್ತಿದ್ದಿರಿ, ಅದರಲ್ಲಿ ಉಳಿತಾಯವೇನಾದರೂ ಆಗಿದೆಯೋ ಎನ್ನು ವುದನ್ನು ದಯವಿಟ್ಟು ತಿಳಿಸುತ್ತೀರಾ!

ಶ್ರೀ ಬಿ. ಡಿ. ಜತ್ತಿ.—ಮೊದಲನೇ ಪ್ರಶ್ನೆಗೆ ಉತ್ತರ ಹೇಳಿದಾಗ ಮಾನ್ಯ ಸದಸ್ಯರು ಇರಲಿಲ್ಲ. ಸಕ್ಕರೆಗೆ ಎರಡು ಜೋನ್ ಮಾಡಿ, ಒಂದು ಜೋನ್‌ನಲ್ಲಿ 145 ರೂಪಾಯಿಗಳ ಪ್ರಕಾರ, ಇನ್ನೊಂದು ಜೋನ್‌ನಲ್ಲಿ 161 ರೂಪಾಯಿಗಳ ಪ್ರಕಾರ ಕೊಂಡುಕೊಳ್ಳುತ್ತಿದ್ದೆವು. ಹೈಕೋರ್ಟಿಗೆ ರಿಟ್ ಹಾಕಿದ್ದರಿಂದ ಅವರು ಇಂಟೆರಿಂ ಆರ್ಡರ್ ಮಾಡಿ ಎಲ್ಲರಿಗೂ 161 ರೂಪಾಯಿ ಪ್ರಕಾರ ಕೊಡಬೇಕು ಎಂದು ಹೇಳಿದ್ದರಿಂದ ವ್ಯತ್ಯಾಸ ಕಾಣಿಸುತ್ತಿದೆ. ಈಗ ಎರಡೂ ಕಡೆ ಒಂದೇ ರೇಟಿಗೆ ಅಂದರೆ 161 ರೂಪಾಯಿಗಳಿಗೆ ಕೊಂಡು 172 ರೂಪಾಯಿಗಳಿಗೆ ಮಾರಬಹುದು. ನಾವು 175 ರೂಪಾಯಿಗಳಿಗೆ ಮಾರುತ್ತಿದ್ದೇವೆಂದು ಹೇಳಿದೆ. ಮಳಿಗೆ, ಆಫೀಸು, ಬೇರೆ ಬೇರೆ ಕಡೆಗೆ ಇತ್ತು. ಅದನ್ನೆಲ್ಲ ಒಂದೇ ಕಡೆ ಕೇಂದ್ರೀಕೃತ ಮಾಡಿದ್ದೇವೆ. ಬಾಡಿಗೆ ಹೆಚ್ಚು ಆಗುತ್ತದೆಯೋ ಹೊರತು ಕಡಿಮೆಯಾಗುವುದಿಲ್ಲ. ಎಷ್ಟು ಉಳಿತಾಯವಾಗುತ್ತದೆ ಅಥವಾ ಹೆಚ್ಚಾಗುತ್ತದೆ ಎನ್ನುವುದನ್ನು ನೋಡಿ ಹೇಳಬೇಕು.

11-00 A.M.

ಶ್ರೀ ಕೊಟ್ರಬಸವಯ್ಯ ಸೋಗಿ (ಹಡಗಲಿ).—ಪ್ರೊಕ್ಯೂರ್‌ಮೆಂಟ್ ಮಾಡಲು ಕೆಲವು ಪ್ರೋಸೆಸಿಂಗ್ ಸೊಸೈಟಿಗಳಿಗೆ ಅವಕಾಶ ಕೊಡಲಾಗಿದೆ. ಬಳ್ಳಾರಿ ಜಿಲ್ಲೆಯ ಮಲ್ಲೇಶ್ವರ ಸೊಸೈಟಿಯಿಂದ 14-15 ಲಕ್ಷ ರೂಪಾಯಿ ಬರಬೇಕಾಗಿದೆ ಎಂದು ಆಡಿಟ್ ವರದಿಯಲ್ಲಿದೆ. ಅದನ್ನು ಬರಮಾಡಿಕೊಳ್ಳಲು ಕ್ರಮ ಕೈಕೊಂಡಿರುವುದೇನು ? ಇದೇ ಜಿಲ್ಲೆಯ ಇನ್ನೊಂದು ಸೊಸೈಟಿ ಜೋಳವನ್ನು ದಾವಣಗೆರೆಗೆ ಮಾರಾಟಮಾಡಿರುವ ದೂರಿನ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಬಿ. ಡಿ. ಜತ್ತಿ.—ಒಂದು ಸೊಸೈಟಿಯ ಬಗ್ಗೆ ಕ್ರಮ ತೆಗೆದುಕೊಳ್ಳುವ ಕೆಲಸ ಆರಂಭವಾಗಿದೆ, ಇನ್ನೊಂದು ಸೊಸೈಟಿಯ ಬಗ್ಗೆ ಕ್ರಮ ಕೈಕೊಂಡು ಹಣ ವಸೂಲುಮಾಡಲಾಗುವುದು.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಬೆಂಗಳೂರು ಮತ್ತು ಕೆ.ಜಿ.ಎಫ್. ಮೈನಿಂಗ್ ಪ್ರದೇಶಕ್ಕೆ ತಿಂಗಳಿಗೆ 5 ಕೆ.ಜಿ. ಕೊಡುವುದಾಗಿ ಹೇಳುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದುದು. ಗ್ರಾಮಾಂತರ ಪ್ರದೇಶಗಳಿಗೆ ತಿಂಗಳಿಗೆ 5 ಕೆ.ಜಿ. ಕೂಡ ಕೊಡುತ್ತಿಲ್ಲ. ಇನ್ನುಮೇಲಾದರೂ ಕೊಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ವರ್ಷವೆಲ್ಲಾ ಸಮಗ್ರ ರಾಜ್ಯದಲ್ಲಿ ಎಲ್ಲರಿಗೂ 5 ಕೆ.ಜಿ. ಕೊಡುತ್ತೇವೆ ಎಂದು ಹೇಳಿಲ್ಲ, ಅಭಾವವಿರುವ ಕಡೆ, ಕಷ್ಟವಿರುವ ಕಡೆ 5 ಕೆ.ಜಿ. ಕೊಡಲು ಏರ್ಪಾಡು ಮಾಡಿದ್ದೇವೆ. ಆಹಾರ ಪದಾರ್ಥಗಳು ದೊರೆಯುವ ಸ್ಥಳಗಳನ್ನು ಕೈಬಿಡಲಾಗಿದೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಪ್ರೊಡ್ಯೂಸರ್‌ನಿಂದ ಸರಕಾರ ತೆಗೆದುಕೊಳ್ಳುವ ದರಕ್ಕೂ ಮತ್ತು ಹೊರಗಡೆ ಮಾರುವ ದರಕ್ಕೂ ವ್ಯತ್ಯಾಸವಿರುವುದರಿಂದ ವ್ಯವಸಾಯಕ್ಕೆ ಕೊಡುವ ಸಾಲದ ಮೇಲೆ ಬಡ್ಡಿ, ಚಕ್ರಬಡ್ಡಿ ತೆಗೆದುಹಾಕಿ ಫರ್ಟಿಲೈಜರ್, ಡೀಸಲ್ ಮತ್ತು ಪೆಸ್ಟಿಸೈಡ್ಸ್ ಮುಂತಾದವುಗಳ ಮೇಲೆ ರಿಯಾಯಿತಿ ತೋರಿಸುವುದನ್ನು ಯೋಚನೆಮಾಡಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಸಬ್ಸಿಡಿ ಕೊಡುವ ವಿಷಯ ವಕ್ಕಲತನದ ಇಲಾಖೆಗೆ ಸಂಬಂಧಪಟ್ಟಿದೆಯಾದುದರಿಂದ ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ಲೆವಿ ವಿಚಾರ ಚರ್ಚೆಮಾಡುವಾಗ ಈಗಿರುವ ವ್ಯವಸ್ಥೆಗೆ ಬದಲಾಗಿ ವ್ಯವಸಾಯಕ್ಕೆ ಆಗುವ ಖರ್ಚು, ಸಂಸಾರಕ್ಕೆ ಬೇಕಾಗುವುದು ಮುಂತಾದ್ದಕ್ಕೆಲ್ಲಾ ಅವಕಾಶ ಕೊಟ್ಟಮೇಲೆ ಲಾಭ ಬರುವಂತಿದ್ದರೆ ಉಳಿದಿರುವುದನ್ನು ತೆಗೆದುಕೊಳ್ಳಲು ಯೋಚನೆಮಾಡುವುದಾಗಿ ಹೇಳಿದ್ದಿರಿ. ಅಗ್ರಿಕಲ್ಚರಲ್ ಪ್ರೈಸ್ ಕಮಿಷನ್‌ನಲ್ಲಿ ಮಾರ್ಕೆಟಬಲ್ ಪ್ರೈಸ್, ನೋಡಿ ಸರ್ಪಲಸ್ ಇದ್ದರೆ ಸೇಕಡ 15 ಭಾಗ ತೆಗೆದುಕೊಳ್ಳಬೇಕು ಎಂದು ಹೇಳಿತ್ತು. ಆ ರೀತಿ ಮಾಡಲು ಇನ್ನುಮುಂದೆ ಯೋಚನೆಮಾಡುವುದಾಗಿ ಹೇಳಿದ್ದರು. ಅದನ್ನು ಯೋಚನೆ ಮಾಡಿದ್ದೀರಾ ಅಥವಾ ಈಗಿರುವಂತೆಯೇ ಮುಂದುವರಿಸುತ್ತೀರಾ ?

ಕೇರಳದಲ್ಲಿ ಎರಡು ಎಕರೆಗಳಿಗಿಂತ ಕಡಮೆ ಇರುವವರಿಗೆ ವಿನಾಯಿತಿ ಕೊಡುತ್ತಿದ್ದಾರೆ, ಇಲ್ಲೂ ಕೂಡ ಅದೇ ರೀತಿ ಜಾರಿಗೆ ತರುತ್ತೀರಾ ? ವ್ಯಕ್ತಿಗಳಿಗೆ ಆಹಾರಧಾನ್ಯಗಳನ್ನು ಕೊಡುವುದನ್ನು ನಿಲ್ಲಿಸಿ ಸೊಸೈಟಿಗಳು ಯಾವ ದೂರಿಗೂ ಒಳಗಾಗದೆ ಚೆನ್ನಾಗಿ ಕೆಲಸಮಾಡುತ್ತಿದ್ದರೆ ಅವುಗಳೇ ಆಹಾರ ಪದಾರ್ಥಗಳನ್ನು ಮಾರಾಟಮಾಡಲು ಒಂದು ವ್ಯವಸ್ಥೆಮಾಡಿ ಅದರಂತೆ ಜಾರಿಗೆ ತರುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಸರಕಾರದ ನೀತಿಯ ಪ್ರಕಾರ ಎಲ್ಲೆಲ್ಲಿ ಸಹಕಾರ ಸಂಘಗಳು ಮುಂದೆ ಬರುತ್ತವೆ ಅಲ್ಲಿ ಅವುಗಳಿಗೇ ವಹಿಸಲಾಗುವುದು. ವ್ಯಕ್ತಿಗಳಿಗೆ ಅವಕಾಶ ಕೊಟ್ಟಿರುವ ಕಡೆ ಸಹಕಾರ ಸಂಘಗಳು ಮುಂದೆ ಬಂದರೆ ವ್ಯಕ್ತಿಗಳನ್ನು ರದ್ದುಮಾಡುತ್ತಲಿದೆ. ನಮ್ಮಲ್ಲಿ ಒಂದು ಎಕರೆಗೆ ವಿನಾಯಿತಿಯು ಲೆವಿ ಬಗ್ಗೆ ಇದೆ. ಅದರ ಇರಿಗೇಟೆಡ್ ಅಥವಾ ನಾನ್ ಇರಿಗೇಟೆಡ್ ಎಂದು ವ್ಯತ್ಯಾಸಮಾಡಿಲ್ಲ. ಮನೆಗೆ ಬೇಕಾದಷ್ಟನ್ನು ಬಿಟ್ಟು ಉಳಿಯುವುದನ್ನು ನೋಡಿ ಲೆವಿ ವಸೂಲು ಮಾಡಬೇಕು ಎಂದು ಈಗ ಗೊತ್ತುಮಾಡಿದೆ. ಅದನ್ನು ವ್ಯತ್ಯಾಸ ಮಾಡಬೇಕು ಎನ್ನುವುದಾದರೆ ವಿಚಾರಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಸೊಸೈಟಿಯವರು ಲೆವಿ ತೆಗೆದುಕೊಳ್ಳುವಾಗ 4 ರಿಂದ 8 ಕೇಜಿಗಳವರೆಗೆ ಬತ್ತ ಜಾಸ್ತಿ ತೆಗೆದುಕೊಳ್ಳುತ್ತಾರೆ. ನಮ್ಮ ನಂಜನಗೂಡು ಸೊಸೈಟಿಗೆ ಹೋದ ವರ್ಷ 1 ಲಕ್ಷ 20 ಸಾವಿರ ರೂಪಾಯಿಗಳ ಲಾಭ ಬಂದಿದೆ,

ಇದು ರೈತರಿಗೆ ಸೇರಬೇಕು. ಹಾಗೆ ಮಾಡಲು ಬೋನಸ್ ರೂಪವಾಗಿ ಅವರಿಗೆ ಕೊಡುತ್ತೀರಾ? ಹೀಗೆ ಲಾಭ ಬರುತ್ತಿರುವುದರಿಂದ ಸೊಸೈಟಿಗಳಲ್ಲಿ ಪ್ರೆಸಿಡೆಂಟ್ ಆಗಬೇಕು, ಡೈರೆಕ್ಟರಾಗಬೇಕು ಎಂದು ಅನೇಕರಲ್ಲಿ ಕಚ್ಚಾಟ ಜಾಸ್ತಿಯಾಗಿದೆ.

ಶ್ರೀ ಬಿ. ಡಿ. ಜತ್ತಿ.—ಅವರು ನನಗೆ ಹಿಂದೆ ಹೇಳಿದ್ದನ್ನೇ ಈಗಲೂ ಹೇಳಿದ್ದಾರೆ, ಎಷ್ಟು ಅವರು ತೆಗೆದುಕೊಂಡಿದ್ದಾರೆಂಬುದನ್ನು ನೋಡಬೇಕು. ಮಾನ್ಯ ಸದಸ್ಯಣಿಯರು ತಿಳಿಸಿದಂತೆ ಒಂದು ಕ್ವಿಂಟಾಲಿಗೆ 4 ರಿಂದ 8 ಕೇಜಿಗಳವರೆಗೆ ಹೆಚ್ಚಾಗಿ ತೆಗೆದುಕೊಂಡಿರುವರೇ ಎಂದು ವಿಚಾರವಾಡಿ ನೋಡಲು ಪ್ರಯತ್ನಮಾಡಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ್).—ಎಸೆನ್‌ಷಿಯಲ್ ಕಮಾಡಿಟೀಸ್, ಬೇಬಿ ಫುಡ್ ಮುಂತಾದುವನ್ನು ಗ್ರಾಮಾಂತರಗಳಿಗೆ ಹಂಚುವ ವ್ಯವಸ್ಥೆಮಾಡಿಲ್ಲ, ಈ ಬಗ್ಗೆ ವಿವರ ಹೇಳಬೇಕು. ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಸೊಸೈಟಿಗಳ ಮೂಲಕ ಹಂಚಿಕೆ ನಡೆಯುತ್ತಿದೆ, ಧಾರವಾಡದಲ್ಲೂ ಸ್ವಲ್ಪಮಟ್ಟಿಗೆ ಅದೇ ರೀತಿ ಇದೆ. ಆದರೆ ಹುಬ್ಬಳ್ಳಿಯಲ್ಲಿ ದೊಡ್ಡ ವ್ಯಾಪಾರಿಗಳಿಗೆ ಅವಕಾಶ ಕೊಡಲಾಗಿದೆ. ಇದನ್ನು ರದ್ದುಮಾಡಬೇಕು.

ಶ್ರೀ ಬಿ. ಡಿ. ಜತ್ತಿ.—ಬೆಂಗಳೂರು ಸುತ್ತಮುತ್ತ ಸಿವಿಲ್ ಸಪ್ಲೈಸ್ ಅಧಿಕಾರಿಗಳು ಹಂಚಿಕೆ ಮಾಡುತ್ತಾರೆ. ಇತರ ಕಡೆಗಳಿಗೂ ಸೊಸೈಟಿಗಳ ಮೂಲಕ ಈ ವರ್ಷ ಹಂಚಿಕೆ ಮಾಡಲು ಪ್ರಯತ್ನಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ಜನರಿಗೆ ನ್ಯಾಯಬೆಲೆಯ ಅಂಗಡಿಗಳಲ್ಲಿ ಕಲ್ಲು ಮಣ್ಣು ಬೆರೆಸಿ ಒದಗಿಸುತ್ತಿದ್ದಾರೆ. ಅದನ್ನು ಬೆರೆಸುವವರು ಯಾರು ? ಸರಕಾರದವರು ಬೆರೆಸುವರೇ ಅಥವಾ ಅಂಗಡಿಯವರು ಬೆರೆಸುತ್ತಾರೆಯೇ? ಎರಡನೆಯದು ಈ ರೇಷನ್ ಒದಗಿಸುವ ಬಗ್ಗೆ ಪತ್ರಿಕೆಯಲ್ಲಿ ವಿವರ ಬರುತ್ತಿದೆ. ಈ ವಾರ ಅರ್ಧ ಕೋಟಾ ಕೊಡುತ್ತೇವೆ, ಈ ವಾರ ಪೂರ್ಣ ಕೋಟಾ ಕೊಡುತ್ತೇವೆ ಎಂದು ಪತ್ರಿಕೆಯಲ್ಲಿ ಹಾಕುತ್ತಾರೆ. ಇದರಲ್ಲಿ ಯಾವುದು ನಿಜ? ಮೂರನೆಯದು ಮದುವೆ ಸಮಾರಂಭಗಳಿಗೆ ಈಗ ಅಕ್ಕಿ ಕೊಡುತ್ತಿಲ್ಲ. ಅನೇಕರು ಅರ್ಜಿ ಕೊಟ್ಟರೂ ಕೊಡುತ್ತಿಲ್ಲ. ಕೊಡಲು ಸೂಚನೆ ಕೊಡುತ್ತೀರಾ?

ನಾಲ್ಕನೆಯದು, ನ್ಯಾಯಬೆಲೆಯ ಅಂಗಡಿಗಳು ಸರಿಯಾಗಿ ನಡೆಯುತ್ತಿಲ್ಲ. ಆದುದರಿಂದ ಇದನ್ನು ಪರಿಶೀಲಿಸಿ ಸರಕಾರದವರೇ ಡಿವಿಜನ್ನುಗಳಲ್ಲಿ ಡಿಪೋಗಳನ್ನು ತೆರೆಯಬೇಕೆಂದು ಇದ್ದೀರಾ?

ಶ್ರೀ ಬಿ. ಡಿ. ಜತ್ತಿ.—ಅಕ್ಕಿ ವಿಷಯವನ್ನು ಮಾನ್ಯ ಸದಸ್ಯರು ಹೇಳಿದರು. ಅವರು ಹೇಳಿದಂತೆ ಆಗುತ್ತಿಲ್ಲ. ಇದುವರೆಗೆ ಒಬ್ಬ ವಯಸ್ಕನಿಗೆ ಒಂದು ತಿಂಗಳಿಗೆ 3 ಕೇಜಿ ಕೊಡುತ್ತಿತ್ತು. ಓಪನ್ ಮಾರ್ಕೆಟ್ಟಿನಲ್ಲಿ ಅಕ್ಕಿ ಈಗ ಸಾಕಾದಷ್ಟು ಸಿಕ್ಕುತ್ತಿದೆ. ಈಗ 3 ಕೇಜಿಗೆ ಬದಲಾಗಿ 2 ಕೇಜಿ ಕೊಡಲಾಗುತ್ತಿದೆ.

ಎರಡು ತಿಂಗಳು ಈ ರೀತಿ ನೋಡಿ ಉಳಿತಾಯವಾದರೆ ಸೆಪ್ಟೆಂಬರ್, ಅಕ್ಟೋಬರ್ ಮತ್ತು ಮುಂದಿನ ತಿಂಗಳುಗಳಲ್ಲಿ ಲೀನ್ ಮಂತ್ಸ್‌ನಲ್ಲಿ ಕೊಡಲಿಕ್ಕೆ ಅನುಕೂಲವಾಗುತ್ತದೆ. ಎರಡನೆ ವಿಷಯ ಕಲ್ಲು ಮಣ್ಣು ಬೆರೆಸಿ ಸರ್ಕಾರದವರು ಮಾರಾಟ ಮಾಡುತ್ತಾರೆ ಎಂದು ಹೇಳಿದರು, ಇದು ಶುದ್ಧ ತಪ್ಪು, ಅನ್ಯಾಯ, ಸರ್ಕಾರದವರು ಆ ರೀತಿ ಎಲ್ಲಾ ಮಾಡುವುದಕ್ಕೆ ಹೋಗುವಂತಹ ಅವಶ್ಯಕತೆ ಇಲ್ಲ, ಒಂದುವೇಳೆ ಆ ರೀತಿ ಎಲ್ಲಾದರೂ ಇದ್ದರೆ ಸರಿಪಡಿಸುತ್ತೇವೆ. ಮಾರಾಟ ಮಾಡತಕ್ಕ ಅಂಗಡಿಯಲ್ಲಿ ಆಗಿರಬಹುದು, ನನಗೆ ಗೊತ್ತಿದ್ದಹಾಗೆ ಅದೂ ಕೂಡ ಇಲ್ಲ ಎಂದು ಹೇಳಬಹುದು, ಎಲ್ಲಾದರೂ ಒಬ್ಬಿಬ್ಬರು ಆ ರೀತಿ ಮಾಡತಕ್ಕವರು ಇದ್ದರೆ ಅವರ ಮೇಲೆ ಸಾಕಾದಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಇದುವರೆಗೂ ಈ ವರ್ಷದಲ್ಲಿ 300 ಅಂಗಡಿಗಳ ಲೈಸೆನ್ಸನ್ನು ಕ್ಯಾನ್ಸಲ್ ಮಾಡಿದ್ದೇವೆ. ಆದರೆ ಕೆಲವು ಸಂದರ್ಭಗಳಲ್ಲಿ ಮಾನ್ಯ ಸದಸ್ಯರೇ ಬಂದು ಕ್ಯಾನ್ಸಲ್ ಮಾಡಿದವರಿಗೆ ತಿರುಗಿ ಕೊಡಿಸಲಿಕ್ಕೆ ಕೇಳಿಕೊಂಡು ಬರುತ್ತಾರೆ, ಅದನ್ನು ದಯಮಾಡಿ ಅವರು ಬಿಟ್ಟುಬಿಟ್ಟರೆ ಒಳ್ಳೆಯದು. ಲಗ್ನಕಾರ್ಯದ ವಿಷಯದಲ್ಲಿ ಕಂಟ್ರೋಲ್ಡ್ ಕಮಾಡಿಟಿ ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳಲಿಕ್ಕೆ ಸಾಧ್ಯವಾಗದೇ ಹೋದರ ಬಿಡಲ...

ಶ್ರೀ ವಾಟಾಳ್ ನಾಗರಾಜ್.—ಬಡವರಿಗೆ ಬಹಳ ಕಷ್ಟವಾಗುತ್ತಾ ಇದೆ, ಬ್ಲಾಕ್ ಮಾರ್ಕೆಟ್‌ನಲ್ಲಿ ತೆಗೆದುಕೊಳ್ಳಬೇಕು, ಸರ್ಕಾರಿ ಡಿಪೋಗಳನ್ನು ತೆಗೆಯುತ್ತೀರಾ ಎಂದು ಕೇಳಿದೆ. ನ್ಯಾಯಬೆಲೆ ಅಂಗಡಿಗಳನ್ನು ರದ್ದುಮಾಡಿ ಪ್ರತಿ ಡಿವಿಜನ್‌ನಲ್ಲೂ ಸರ್ಕಾರಿ ಡಿಪೋಗಳನ್ನು ತೆಗೆಯುತ್ತೀರಾ ಎಂಬುದನ್ನು ಹೇಳಬೇಕು.

ಚೇರ್ಮನ್‌ರವರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ಅವರು 3 ಪ್ರಶ್ನೆಗಳಿಗೆ ಉತ್ತರ ಕೊಡಬೇಕು, ಎರಡು ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ, ಇನ್ನೊಂದು ಪ್ರಶ್ನೆಗೆ ಉತ್ತರ ಕೊಡಬೇಕು, ತಾವು ಈ ರೀತಿ ಹಟಮಾಡಬೇಡಿ, ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ.

ಚೇರ್ಮನ್‌ರವರು.—ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಮುಖ್ಯವಾದ ಪ್ರಶ್ನೆ ಸ್ವಾಮಿ, ಸರ್ಕಾರದವರು ಕೊಟ್ಟಂತಹ ಪದಾರ್ಥವನ್ನು ಬ್ಲಾಕ್ ಮಾರ್ಕೆಟ್ ಮಾಡುತ್ತಾ ಇದ್ದಾರೆ. ಅದನ್ನು ನಿಲ್ಲಿಸುವುದಕ್ಕೆ ಸರ್ಕಾರದವರೇ ಡಿಪೋ ತೆಗೆಯುತ್ತೀರಾ ಅಂತ ಕೇಳಿದ್ದೇನೆ. ಇದು ಬಹಳ ಪ್ರಾಮುಖ್ಯವಾದದ್ದು ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು ಸ್ವಾಮಿ. ತಾವು ದಯುವಿಟ್ಟು ಹಟ ಮಾಡಬೇಡಿ, ಯಾವಾಗಲೂ ಇದೇ ರೀತಿ ತಾವು ಹಟ ಮಾಡುತ್ತೀರಿ, ಈ ರೀತಿ ಮಾಡಬೇಡಿ ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. CHAIRMAN.—Let him please resume his seat.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಪ್ರಾಮುಖ್ಯವಾದ ಪ್ರಶೆ. ಬ್ಲಾಕ್ ಮಾರ್ಕೆಟ್ ನಡೆಯುತ್ತಾ ಇದೆ. ಅದಕ್ಕೆ ಕೇಳುತ್ತಾ ಇದ್ದೇನೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದಾರೆ, ದಯುವಿಟ್ಟು ತಾವು ಅವಕಾಶ ಕೊಡಬೇಕು ಸ್ವಾಮಿ, ತಾವು ಈ ರೀತಿ ಮಾಡುತ್ತಾ ಹೋದರೆ ನಾವು ಅದನ್ನು ಪ್ರತಿಭಟನೆ ಮಾಡಬೇಕಾಗುತ್ತದೆ.

Mr. CHAIRMAN.—The Hon'ble Minister need not reply.

ಶ್ರೀ ಎಸ್. ಬಂಗಾರಪ್ಪ.—ಪಾಯಿಂಟ್ ಆಫ್ ಆರ್ಡರ್ ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಅಧ್ಯಕ್ಷರನ್ನು ಅವರು ಕೇಳಿದ ಮೂರು ಪ್ರಶ್ನೆಗಳಿಗೆ 2ಕ್ಕೆ ಉತ್ತರ ಬಂದಿದೆ ಇನ್ನೊಂದಕ್ಕೆ ಉತ್ತರ ಕೊಡಿಸಿಕೊಡಬೇಕೆಂದು ಬಿನ್ನೈಸಿಕೊಂಡರು. ಮಾನ್ಯಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ ಮತ್ತು ಅವರು ಉತ್ತರ ಕೊಡುವುದಕ್ಕೂ ಕೂಡ ಅಲ್ಪಸ್ವಲ್ಪ ಎದ್ದಿದ್ದರು. ಆದರೆ ಅಧ್ಯಕ್ಷರು ಆ ಕಡೆಗೆ ಗಮನ ಕೊಡಲಿಲ್ಲ ಅಂತ ಕಾಣುತ್ತದೆ, ನೋಡಲಿಲ್ಲ ಅಂತ ಕಾಣುತ್ತದೆ, ದಿ ಮಿನಿಸ್ಟರ್ ವಿಲ್ ನಾಟ್ ರಿಪ್ಲೈ ಅಂತ ಹೇಳಿದರು. ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅರ್ಧಂಬರ್ಧ ತಯಾರಾಗಿದ್ದರು, ಹಾಗಿರುವಾಗ ತಾವು ಆ ರೀತಿ ದಿ ಮಿನಿಸ್ಟರ್ ವಿಲ್ ನಾಟ್ ರಿಪ್ಲೈ ಅಂತ ಹೇಳುವುದು ಸರಿಯೇ ಎಂಬುದು ನನ್ನ ಪಾಯಿಂಟ್ ಆಫ್ ಆರ್ಡರ್. ಮತ್ತು ಸದಸ್ಯರಿಗೆ ಪ್ರಶ್ನೆ ಕೇಳುವುದಕ್ಕೆ ಹಕ್ಕು ಇದೆ ಎಂಬುದು ನಿರ್ವಿವಾದವಾದ ವಿಷಯ. ಅದಕ್ಕೆ ಉತ್ತರ ಕೊಡುವುದೂ ಕೂಡ ಮಂತ್ರಿಗಳ ಜವಾಬ್ದಾರಿ. ಆ ದೃಷ್ಟಿಯಿಂದ ಸದಸ್ಯರಿಗೆ ಇರತಕ್ಕ ಹಕ್ಕು ಪ್ರಶ್ನೆ ಕೇಳುವುದು ಮತ್ತು ಅದಕ್ಕೆ ಉತ್ತರವನ್ನು ಮಿನಿಸ್ಟರಿಂದ ಪಡೆಯತಕ್ಕ ಹಕ್ಕು ಏನಿದೆ ಅದಕ್ಕೆ ಲೋಪ ಬಂದಹಾಗೆ ಆಗುತ್ತದೆ. ಆ ದೃಷ್ಟಿಯಿಂದ ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು, ಮತ್ತು ಆ ರೀತಿ ದಿ ಮಿನಿಸ್ಟರ್ ವಿಲ್ ನಾಟ್ ರಿಪ್ಲೈ ಅಂತ ತಾವು ಆರ್ಡರ್ ಮಾಡದೇ ಸಚಿವರಿಂದ ಉತ್ತರ ಕೊಡಿಸಬೇಕು ಎಂದು ಹೇಳುತ್ತೇನೆ.

Mr. CHAIRMAN.—Hon'ble Member Mr. Bangarappa has raised a point of order. The question was that the Hon'ble Member Mr. Vatal Nagaraj asked a few questions. They were replied. The Chair came to know that the questions were being again repeated.

ಶ್ರೀ ವಾಟಾಳ್ ನಾಗರಾಜ್.—ನಾನು ಕೇಳುತ್ತಾ ಇರುವುದು ಇಷ್ಟೆ; ತಾವು ಹಟ ಮಾಡಬೇಡಿ, ತಮ್ಮನ್ನು ಕ್ಷಮೆಯಾಗಿದು ಕೊಂಡು ಕೇಳುತ್ತಾ ಇದ್ದೇನೆ. ನಾನು ಕೇಳುವುದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ತಾವು ಈ ರೀತಿ ಮಾಡುತ್ತಾ ಇರುವುದರಿಂದ ನಮ್ಮ ಹಕ್ಕಿಗೆ ಲೋಪ ಬಂದಿದೆ.

Mr. CHAIRMAN.—The ruling of the Chair has got to be obeyed.

Sri AZIZ SAIT.—I rise to a point of order. The point of order is this: I do not want to bring any insinuation against the Chair. I feel sorry that the Chair while giving the ruling has not allowed any member to substantiate the point of order raised by Mr. Bangarappa. I do not want to question your ruling. I want your good self to kindly recollect from the records available that the Chair allowed the Hon'ble Member to

put the question and the Minister replied but he replied only to two questions and when he got up to reply the third question, the Hon'ble Chair did not permit the Minister to answer. Is it correct ? When the Chair permitted the Member to put the question, how far the Chair is right in calling upon the Minister not to reply ? So long as he is an elected member, he has every right to put question and elicit replies from the Minister and it is the bounden duty of the Minister to reply to the questions raised by the Member when the Member is allowed to put the questions.

Mr. CHAIRMAN.—The Chair has already given the ruling on this subject. There is no force in the point of order.

Sri D. M. SIDDIAH (Beligere).—I move for closure.

Mr. CHAIRMAN.—Now there is motion for closure. I will put it to the House.

Sri S. SIVAPPA.—The Hon'ble Speaker was pleased to call upon Mr. Sastry to put question. In the meanwhile the Hon'ble Member from the other side wants to obstruct the Speaker's ruling. Is it allowed ? Can you uphold the Member ?

Mr. CHAIRMAN.—That is the motion made by him.

Sri S. SIVAPPA.—Moving of closure motion is irregular. The Member should be told so.

Mr. CHAIRMAN.—Mr. Sastry will put the last question.

Sri M. NAGAPPA.—I rise to a point of order, Sir. Just now Mr. Vatal Nagagraj has put three or four questions and those questions were allowed by the Chair. During answer, the Hon'ble Minister omitted to furnish answer to one of those questions. Has not the Hon'ble Member the right to press his question again for answer ? I submit that in this particular case, the Chair cannot exercise the residuary power and rule out the question as a mere repitition.

Mr. CHAIRMAN.—The ruling is already given. There cannot be a point of order on the ruling of the Chair.

Sri M. NAGAPPA.—The Chair cannot behave in an arbitrary manner. There are rules.

(Interruptions by a number of Hon'ble Members)

Mr. CHAIRMAN.—I will put the Demands *viz* first Demand No. 15 (26) Miscellaneous Departments to the vote of the House. The question is :

> "That a sum not exceeding Rs. 2,22,25,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Miscellaneous Departments'."

The motion was adopted.

(MR. CHAIRMAN)

Now next Demand No. 53 (124) capital outlay on schemes of Government Trading.

The Question is :

"That a sum not exceeding Rs. 29,92,03,200 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Capital Outlay on Schemes of Government Trading'."

The motion was adopted.

Mr. CHAIRMAN.—The demands are granted. Now the House will adjourn for half an hour and meet at 11-55 A.M.

The House rose at Twenty-five Minutes past Eleven of the Clock to re-assemble at Fifty-five Minutes past Eleven of the Clock.

The House re-assembled at Fifty-five Minutes past Eleven of the Clock.

(MR. DEPUTY SPEAKER in the Chair)

Members' Representations

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಸಭಾ ಅಧ್ಯಕ್ಷರೇ, ಈಗಾಗಲೇ ಹಿಂದಿನ ಅಧ್ಯಕ್ಷರು ಫುಡ್ ಡಿಮ್ಯಾಂಡ್ ಮೇಲೆ ನನಗೆ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಟ್ಟಿದ್ದರು. ಈಗ ನಾನು ಪ್ರಶ್ನೆಗಳನ್ನು ಕೇಳುವುದಕ್ಕೆ ಪ್ರಾರಂಭ ಮಾಡುತ್ತೇನೆ.

Mr. DEPUTY SPEAKER.—The demand has already been passed by the House. We must take the next Demand.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ಡಿಮ್ಯಾಂಡ್ ಪಾಸ್ ಆಗಿಲ್ಲ ಸ್ವಾಮಿ, ನನಗೆ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

Sri D. M. SIDDIAH.—On a point of order, Sir. The Demand relating to the Miscellaneous, Food and Civil Supplies has already been passed and as per programme, the Chair has to call the Minister for Co-operation to move his demand.

Mr. DEPUTY SPEAKER.—I uphold the point of order. The next demand may be moved.